₹ 5/-

# ನೇಸರು
## ತಿಂಗಳೋಲೆ

PAGES 24

OCTOBER 2025 Nesaru Tingalole Vol. XLIII - 10

## ಮೈಸೂರು ಅಸೋಸಿಯೇಷನ್ನಿನ ಶತಮಾನೋತ್ಸವದ ವರ್ಷ
## Mysore Association's Centenary Year (1926 - 2026)

100 Years



## ಬೆಂಗಳೂರಿನಲ್ಲಿ ಶತಮಾನೋತ್ಸವದ ಸಂಭ್ರಮ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065
Email : mysoreassociation.mumbai@gmail.com

# ಶತಮಾನದ ಸಂಭ್ರಮದ ನವರಾತ್ರಿ ಉತ್ಸವ





ತಾಯಿಯ ಪೂಜೆಯೇ ನವರಾತ್ರಿ. ಆಕೆ ಮಳೆ ಸುರಿಸಿ, ಬೆಳೆ ಬೆಳೆಸಿ, ನಮ್ಮನ್ನು ತಣಿಸುತ್ತಿರುವಾಗ ಆಕೆಗೆ ನಮ್ಮ ನೆನೆಕೆಗಳನ್ನು ಸಲ್ಲಿಸುವುದೇ ನಮ್ಮ ಕೆಲಸ. ಅಸೋಸಿಯೇಷನ್ನಿನ ದೇವತೆಯೇ "ಶ್ರೀ ಚಾಮುಂಡೇಶ್ವರಿ". ಆಕೆಯ ಮಗನೇ ಗಣೇಶ.









ಈ ನವರಾತ್ರಿಯಲ್ಲಿ ನಮ್ಮ ಮಹಿಳಾ ವಿಭಾಗ ಅತಿ ಹೆಚ್ಚಿನ ಪ್ರೀತಿಯಿಂದ ತಾಯಿಯನ್ನು ಕೂರಿಸಿ ಅವಳ ಅನೇಕ ರೂಪಗಳನ್ನು ನಮ್ಮ ಮುಂದಿಟ್ಟು ಪ್ರತಿ ನಿತ್ಯವೂ ಲಲಿತಾ ಸಹಸ್ರನಾಮ ಪಠನ, ದೇವಿಸ್ತುತಿ ಅಂತೆಯೇ ಆಕೆಯನ್ನು ಕೊಂಡಾಡುವ ಹಾಡುಗಳನ್ನು *(ಪುಟ 23ಕ್ಕೆ)*





ಸಂಪುಟ 43 | ಅಕ್ಟೋಬರ್ 2025 | ಸಂಚಿಕೆ 10

ಗೌ. ಸಂಪಾದಕರು
**ಡಾ. ಜ್ಯೋತಿ ಸತೀಶ್**

❖ ❖ ❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ಕೆ. ಕಮಲ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖ ❖

ಸಂಪರ್ಕ ವಿಳಾಸ:
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in

# ಶತಮಾನೋತ್ಸವದ ಸಂಭ್ರಮದಲ್ಲಿರುವ ಮೈಸೂರು ಅಸೋಸಿಯೇಷನ್



ಡಾ. ಜ್ಯೋತಿ ಸತೀಶ್

ಮುಂಬಯಿ ಮಹಾನಗರದಲ್ಲಿ ಕನ್ನಡ ಕೈಂಕರ್ಯವನ್ನು ಮಾಡುತ್ತಿರುವ ಮೈಸೂರು ಅಸೋಸಿಯೇಷನ್ ಇಂದು ಶತಮಾನೋತ್ಸವದ ಸಂಭ್ರಮದಲ್ಲಿದೆ. ಯಾವುದೇ ಒಂದು ಸಂಸ್ಥೆ ಬೆಳೆಯಬೇಕಾದರೆ, ಅದರಲ್ಲೂ ಹೊರನಾಡಿನಲ್ಲಿ ತನ್ನ ಅಸ್ಮಿತೆಯನ್ನು ಕಟ್ಟಿಕೊಂಡು ಬೆಳೆಯಬೇಕಾದರೆ, ಅದು ಒಬ್ಬರು, ಇಬ್ಬರಿಂದ ಸಾಧ್ಯವಿಲ್ಲ. ನಮ್ಮ ನಾಡಿನ ಕಲೆ, ಸಂಸ್ಕೃತಿಯ ವೈಭವದ ಮೆರಗನ್ನು ಹೊರನಾಡಾದ ಮುಂಬಯಿಯಲ್ಲಿ ಪಸರಿಸುತ್ತಿರುವ ಮೈಸೂರು ಅಸೋಸಿಯೇಷನ್ ನಮ್ಮೆಲ್ಲರ ಹೆಮ್ಮೆಯ ಸಂಸ್ಥೆ.

ಮೈಸೂರು ಅಸೋಸಿಯೇಷನ್ ಹಂತ ಹಂತವಾಗಿ ಬೆಳೆದು ಬಂದು ಇಂದು ಶತಮಾನೋತ್ಸವದ ಸಂಭ್ರಮದಲ್ಲಿದೆ. ಇದರಲ್ಲಿ ಅನೇಕರ ಶ್ರಮವಿದೆ. ಕನ್ನಡ ಸಂಸ್ಕೃತಿ, ಕಲೆ, ಭಾಷೆ, ಸಾಹಿತ್ಯ ಎಲ್ಲವನ್ನೂ ಬೆಳೆಸುವುದಕ್ಕೋಸ್ಕರ ಹಲವಾರು ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುವುದರ ಜೊತೆಗೆ ಮೆಟ್ಟಿದ ನೆಲದ ಭಾಷೆ, ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದರೊಂದಿಗೆ, ಇತರ ಭಾಷೆಗಳ ಸರ್ವತೋಮುಖ ಬೆಳವಣಿಗೆಗೆ ತನ್ನ ಕೊಡುಗೆಯನ್ನು ನೀಡುತ್ತಾ ಬಂದಿರುವುದನ್ನು ಅಲ್ಲಗಳೆಯುವಂತಿಲ್ಲ.

'ಒಗ್ಗಟ್ಟಿದ್ದರೆ ಬಲ' ಎನ್ನುವ ಹಾಗೆ ಮೈಸೂರು ಅಸೋಸಿಯೇಷನ್‌ನ ಎಲ್ಲ ಸದಸ್ಯರು ಬಹಳ ಉತ್ಸುಕತೆಯಿಂದ ಹಾಗೆ ಬಹಳ ಮುತುವರ್ಜಿಯಿಂದ ಕೈಜೋಡಿಸಿರುವುದರಿಂದ ಹಮ್ಮಿಕೊಂಡಿರುವ ಎಲ್ಲ ಕಾರ್ಯಕ್ರಮಗಳು ಬಹು ಸಾಂಗವಾಗಿ ನಡೆದುಕೊಂಡು ಬರುತ್ತಿದೆ. ಮುಂಬರುವ ವರ್ಷಗಳಲ್ಲಿ ಅಸೋಸಿಯೇಷನ್ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎನ್ನುವುದರ ಬಗ್ಗೆ ಈಗಾಗಲೇ ಗಮನಹರಿಸಿದೆ.

99 ವರ್ಷದಷ್ಟು ದೀರ್ಘಕಾಲ ನಡೆದುಕೊಂಡು ಬಂದು 100ನೇ ವರ್ಷಕ್ಕೆ ಕಾಲಿಟ್ಟಿರುವ ಮೈಸೂರು ಅಸೋಸಿಯೇಷನ್‌ನ ಏಳಿಗೆಗಾಗಿ ಶ್ರಮಿಸಿದವರು, ಅದಕ್ಕಾಗಿ ಅನವರತ ದುಡಿದ ಮಹನೀಯರನ್ನು ಈ ಸಂದರ್ಭದಲ್ಲಿ ಮನಸಾ ನೆನೆಯಲೇಬೇಕು. ತಮ್ಮ ಪ್ರತಿ ಹೆಜ್ಜೆಯಲ್ಲೂ, ತಮ್ಮ ಪ್ರತಿ ಉಸಿರಿನಲ್ಲಿ, ಮೈಸೂರು ಅಸೋಸಿಯೇಷನ್‌ನ ಏಳಿಗೆಯ ಕನಸನ್ನು ಹೊತ್ತ ಅದೆಷ್ಟೋ ಮಹನೀಯರ ಸಾಧನೆಯನ್ನು ಈ ಸಂದರ್ಭದಲ್ಲಿ ನೆನೆಯುವುದರ ಜೊತೆಗೆ ಅದು ನಮಗೆಲ್ಲರಿಗೂ ದಾರಿದೀಪವೂ ಹೌದು.

ಸದಸ್ಯರೆಲ್ಲರಿಗೂ ಮೈಸೂರು ಅಸೋಸಿಯೇಷನ್ ತಮ್ಮ ಇನ್ನೊಂದು ಮನೆಯಾಗಿತ್ತು. ಅಲ್ಲಿ ನಡೆವ ಹಬ್ಬಹರಿದಿನಗಳಲ್ಲಿ ತಮ್ಮ ಮನೆಯದ್ದೇ ಹಬ್ಬ ಎನ್ನುವ ಹಾಗೆ ಎಲ್ಲರೂ ಬಹಳ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು. ಸದಸ್ಯರಲ್ಲಿ ಅಡಗಿರುವ ಪ್ರತಿಭೆಗಳನ್ನು ಪ್ರದರ್ಶಿಸಲು ಮೈಸೂರು ಅಸೋಸಿಯೇಷನ್ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ. ಇಲ್ಲಿ ಎಲ್ಲರೂ ತಮ್ಮ ವಯಸ್ಸನ್ನು ಮರೆತು, ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಇಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ, ಎಲ್ಲರೂ ಒಂದೇ, ಒಂದೇ ನಾಡಿನ ಕನ್ನಡ ಮನಸ್ಸುಗಳು ಅಷ್ಟೇ. ಮುಂಬಯಿಯಲ್ಲಿರುವ ಕನ್ನಡಿಗರಿಗೆ ಮಾತ್ರವಲ್ಲದೆ, ವಿಶ್ವದಾದ್ಯಂತ ಕನ್ನಡಿಗರಿಗಾಗಿ ಕಥೆ, ಕವನ, ಏಕಾಂಕ ನಾಟಕ ಸ್ಪರ್ಧೆಗಳನ್ನು ಹಮ್ಮಿಕೊಂಡಿದೆ.

ಇತ್ತೀಚೆಗಷ್ಟೇ ದೂರದ ಬೆಂಗಳೂರಿನಲ್ಲಿ ನೆಲೆಸಿರುವ ತಮ್ಮ ಹಿರಿಯ ಸದಸ್ಯರೊಂದಿಗೆ, ತಮ್ಮ ಶತಮಾನೋತ್ಸವದ ಸಂಭ್ರಮವನ್ನು ಹಂಚಿಕೊಂಡಿದ್ದಾರೆ, ಆ ಪ್ರಯುಕ್ತ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ, ಅಸೋಸಿಯೇಷನ್‌ನ ಏಳಿಗೆಗೆ ಶ್ರಮಿಸಿದ ಆ ಹಿರಿಯ ಜೀವಗಳನ್ನು ಮನಸಾರೆ ಅಭಿನಂದಿಸಿ, ಗೌರವಿಸಿದ್ದಾರೆ.

ಶತಮಾನೋತ್ಸವದ ಸಂಭ್ರಮದಲ್ಲಿರುವ ಮೈಸೂರು ಅಸೋಸಿಯೇಷನ್‌ಗೆ ಎಲ್ಲ ರೀತಿಯ ಶುಭಗಳಿರಲಿ, ಇನ್ನಷ್ಟು ಏಳಿಗೆಯನ್ನು ಹೊಂದಲಿ ಎಂದು ಮನಸಾ ಹಾರೈಸುವೆ.

# ಭಾಷೆಗಳ ಗಡಿ ಗೆದ್ದ ಭಾರತೀಯ ಲೇಖಕ – ಡಾ. ಭೈರಪ್ಪ




✍ ಡಾ. ಜಿ. ಎನ್. ಉಪಾಧ್ಯ,
ಮುಂಬೈ

ತಮ್ಮ ವರ್ಣರಂಜಿತ ವ್ಯಕ್ತಿತ್ವ, ಮಾತು ಕೃತಿಗಳ ಮೂಲಕ ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ ನಾಮಾಂಕಿತ ಲೇಖಕ, ಸಾಹಿತಿ, ಚಿಂತಕ ಡಾ.ಎಸ್.ಎಲ್.ಭೈರಪ್ಪ. ಅಖಿಲ ಭಾರತ ಮಟ್ಟದಲ್ಲಿ ತಾರಾ ಮೌಲ್ಯ ಹೊಂದಿದ್ದ ಬೆರಳೆಣಿಕೆಯ ಸಾಹಿತಿಗಳಲ್ಲಿ ಅವರ ಹೆಸರು ಎದ್ದು ಕಾಣುತಿತ್ತು.ಕನ್ನಡದಂಥ ಪ್ರಾದೇಶಿಕ ಭಾಷೆಯಲ್ಲಿ ಬರೆದು ಕಳೆದ ನಾಲ್ಕೈದು ದಶಕಗಳಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಅಪಾರವಾದ ಜನಮನ್ನಣೆಯನ್ನು ಪಡೆದುಕೊಂಡು ಏಕಮೇವ ಲೇಖಕರೆಂದರೆ ನಮ್ಮ ಹೆಮ್ಮೆಯ ಡಾ.ಭೈರಪ್ಪ.

"ಸಾಹಿತ್ಯ ಇರುವುದೇ ಬದುಕನ್ನು ಅರ್ಥಮಾಡಿಕೊಳ್ಳಲು. ಬದುಕೋದಲ್ಲದೆ ಬದುಕನ್ನು ಆಸ್ವಾದನೆ ಮಾಡೋದುನೂವೇ ಸಾಹಿತ್ಯ. ಬದುಕಿನ ಅನ್ವೇಷಣೆ ಹಾಗೂ ನಿಜಾನುಭವಗಳನ್ನು ಆಧರಿಸಿದ ಸಾಹಿತ್ಯ ಎಲ್ಲ ಕಾಲಕ್ಕೂ ಸಲ್ಲುತ್ತದೆ " ಎಂಬುದನ್ನು ತಮ್ಮ ಬರವಣಿಗೆಯ ಮೂಲಕ ರುಜುವಾತುಗೊಳಿಸಿ ಬೆರಗು ಹುಟ್ಟಿಸಿದವರು ಡಾ.ಭೈರಪ್ಪ. ನಿಸ್ಸಂದೇಹವಾಗಿ ಅವರು ವಿಶ್ವ ಸಾಹಿತಿಗಳಲ್ಲಿ ಒಬ್ಬರು.

ಡಾ.ಎಸ್.ಎಲ್.ಭೈರಪ್ಪ ಅವರದು ಭಾರತೀಯ ಸಾಹಿತ್ಯ ಪ್ರಪಂಚದಲ್ಲಿಯೇ ಒಂದು ಅಪರೂಪದ ವ್ಯಕ್ತಿತ್ವ.ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಅವರೂ ಒಬ್ಬರು. ಪಟ್ಟ ಪಾಡನ್ನು ಹಾಡನ್ನಾಗಿಸಿ ಕನ್ನಡ ಜನಮನದಲ್ಲಿ ಮೋಡಿ ಮಾಡಿದ ಧೀಮಂತ ಸಾಧಕ ಭೈರಪ್ಪನವರು. ಅವರು ಬದುಕಿನಲ್ಲಿ ಅನೇಕ ಅಗ್ನಿದಿವ್ಯಗಳನ್ನು ಹಾದು ಬಂದವರು.ಸಾವನ್ನು ಅರಿಯುವ ತನಕ ಜೀವನ ಅರ್ಥವಾಗುವುದಿಲ್ಲ.ಬರೀ ಹುಟ್ಟಿದರೆ ಸಾಲದು, ಸತ್ತು ಹುಟ್ಟಬೇಕು.ಆಗ ಜೀವನದ ಬೆಲೆ ಗೊತ್ತಾಗುತ್ತದೆ. ಇದನ್ನೇ ಅವರು ತಮ್ಮ ಕೃತಿಗಳಲ್ಲಿ ಎರಕ ಹೊಯ್ದು ಲೋಕಮಾನ್ಯರಾದದು ಈಗ ಇತಿಹಾಸ. ಜನಪ್ರಿಯ ಕಾದಂಬರಿಕಾರರಾದರೂ ಅವರ ಸಾಧನೆ,ವಿಕ್ರಮಗಳು ಅನೇಕ.ತಮ್ಮ ಸತ್ವಯುತವಾದ ಕೃತಿಗಳ ಮೂಲಕ ಜಾಗತಿಕ ಸಾರಸ್ವತ ಲೋಕದಲ್ಲಿ ಅವರು ಚಿರಸ್ಥಾಯಿಯಾಗಿದ್ದಾರೆ. ನಮ್ಮ ನಾಡಿನ ಸಾಂಸ್ಕೃತಿಕ ಕ್ಷೇತ್ರವನ್ನು ಜಗದಗಲ ಮುಗಿಲಗಲಕ್ಕೆ ಏರಿಸಿದ ಹೆಚ್ಚುಗಾರಿಕೆ ಸಹ ಭೈರಪ್ಪನವರದು.ಅವರು ಕೇವಲ ಸಾಹಿತಿಯಷ್ಟೇ ಅಲ್ಲ. ಸೂಕ್ಷ್ಮ ಸಂವೇದನಶೀಲ ಚಿಂತಕರೂ ಆಗಿದ್ದರು.ಸರ್ವ ಕುತೂಹಲಿಯಾಗಿದ್ದ ಅವರಿಗೆ ತತ್ವಶಾಸ್ತ್ರ ಕರತಲಾಮಲಕವಾಗಿತ್ತು. ದೇಶದ ಸಾಂಪ್ರತ ವಿದ್ಯಮಾನಗಳಿಗೆ ಭೈರಪ್ಪನವರಂತೆ ಸಶಕ್ತವಾಗಿ ಸ್ಪಂದಿಸುತ್ತ ಬಂದ ಚಿಂತಕರು ತೀರ ವಿರಳವೆಂದರೂ ತಪ್ಪಾಗಲಾರದು.



ಭೈರಪ್ಪನವರು ಅಖಿಲ ಭಾರತ ಮಟ್ಟದಲ್ಲಿ ಅಪಾರವಾದ ಮನ್ನಣೆಯನ್ನು ಪಡೆದ ಏಕೈಕ ಕನ್ನಡ ಕಾದಂಬರಿಕಾರ. ಕನ್ನಡದ ಬೇರಾವ ಲೇಖಕರ ಕೃತಿಗಳೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಭಾರತೀಯ ಭಾಷೆಗಳಿಗೆ ಭಾಷಾಂತರಗೊಂಡಿಲ್ಲ ಎಂಬುದು ಉಲ್ಲೇಖನೀಯ ಸಂಗತಿ. ಹೀಗಾಗಿ ಭೈರಪ್ಪನವರನ್ನು ಭಾರತೀಯ ಸಾಹಿತ್ಯ ನಿರ್ಮಾಪಕರಲ್ಲಿ ಒಬ್ಬರೆಂದು ಗ್ರಹಿಸಿ ದೇಶವ್ಯಾಪಿಯಾಗಿ ಅವರ ಕೃತಿಗಳ ಕುರಿತು ಚರ್ಚೆ, ಅಧ್ಯಯನ, ಚಿಂತನ ಮಂಥನಗಳು, ವಿಚಾರ ವಿಮರ್ಶೆ ನಡೆಯುತ್ತ ಬಂದಿರುವುದು ಕನ್ನಡದ ಭಾಗ್ಯವೇ ಸರಿ.ಭೈರಪ್ಪನವರು ಶಿವರಾಮ ಕಾರಂತ ಮತ್ತು ಅ.ನ.ಕೃಷ್ಣರಾಯರ ಅನಂತರದ ಮಹಾ ಕಾದಂಬರಿಕಾರರು.ಕಾರಂತರ ಕಾದಂಬರಿಗಳಲ್ಲಿ ಕಂಡು ಬರುವ ಜೀವನಾನುಭವ ಹಾಗೂ ಅನಕೃ ಅವರು ಸಂಪಾದಿಸಿದ ಜನಪ್ರಿಯತೆಗಳೆರಡೂ ಭೈರಪ್ಪನವರಲ್ಲಿ ಮೇಳೈಸಿದ್ದವು. "ಯಾರು ಒಪ್ಪಲಿ ಬಿಡಲಿ ಇಂದಿನ ಭಾರತೀಯ ಕಾದಂಬರಿಕಾರರಲ್ಲಿ ಅವರು ತುಂಬ ಮಹತ್ವದವರು, ಅಗ್ರಗಣ್ಯರು" ಎಂಬುದಾಗಿ ಮೂರು ದಶಕಗಳ ಹಿಂದೆಯೇ ನಾಡಿನ ಖ್ಯಾತ ಲೇಖಕ ಡಾ. ಹಾಮಾನಾ ಅವರು ಹೇಳಿದ ಮಾತು ನಿಜವೇ ಆಗಿದೆ.

ಕನ್ನಡದ ಪ್ರಥಮ ದರ್ಜೆಯ ಸೃಜನಶೀಲ ಲೇಖಕರಲ್ಲಿ ಡಾ. ಭೈರಪ್ಪನವರದು ಎದ್ದು ಕಾಣುವ ಹೆಸರು. ಅನಕೃ ಅವರನ್ನು ಬಿಟ್ಟರೆ ಕನ್ನಡದಲ್ಲಿ ಬಹುದೊಡ್ಡ ಓದುಗ ವರ್ಗವನ್ನು ಸೃಷ್ಟಿಸಿದ ಶ್ರೇಯಸ್ಸು ಭೈರಪ್ಪನವರಿಗೆ ಸಲ್ಲುತ್ತದೆ. ಹಿಂದಿ, ಮರಾಠಿ, ಗುಜರಾತಿ, ಒಡಿಯಾ, ತಮಿಳು, ಇಂಗ್ಲಿಷ್ ಹೀಗೆ ಕರ್ನಾಟಕದ, ಭಾರತದ ಹೊರಗೂ ಬಹುದೊಡ್ಡ ಸಹೃದಯ ವಾಚಕರ ಸಂಪತ್ತನ್ನು ಗಳಿಸಿಕೊಂಡ ಧೀಮಂತ ಲೇಖಕರೆಂದರೆ ಡಾ. ಭೈರಪ್ಪ ಮಾತ್ರ ಎಂಬುದು ಸಾಮಾನ್ಯ ಸಂಗತಿಯಲ್ಲ. ಅವರ ಹೆಚ್ಚಿನ ಕೃತಿಗಳು ಆಂಗ್ಲ ಭಾಷೆಗೂ ಭಾಷಾಂತರಗೊಂಡಿವೆ. ಇತ್ತೀಚಿಗೆ ಅವರ ಲೋಕ ವಿಖ್ಯಾತ ಕಾದಂಬರಿ ಪರ್ವ ರಷ್ಯನ್ ಹಾಗೂ ಚೀನೀ ಭಾಷೆಗಳಿಗೂ ಅನುವಾದ ಗೊಂಡಿರುವುದು ಒಂದು ಅಸಾಧಾರಣ ಸಂಗತಿ.ಜರ್ಮನ್ ಭಾಷೆಗೂ ಅವರ ಕಾದಂಬರಿ ಅನುವಾದಗೊಂಡಿರುವುದು ವಿಶೇಷ. ಭಾರತದ ಜನಪ್ರಿಯ ಹಾಗೂ ಜನಸಾಮಾನ್ಯರ ಸಾಹಿತಿ ಎಂಬ ಕೊಂಡಾಟಕ್ಕೂ ಭೈರಪ್ಪ ಅವರು ಪಾತ್ರರಾಗಿದ್ದರು.

ಭೈರಪ್ಪನವರು ನಮ್ಮ ರಾಷ್ಟ್ರದ ಘಟಾನುಘಟಿ ಸೃಜನಾತ್ಮಕ ಚಿಂತಕರಲ್ಲಿ ಒಬ್ಬರಾಗಿದ್ದರು. ಕಾದಂಬರಿಯನ್ನೇ ತಮ್ಮ ಮುಖ್ಯ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡು ಇಪ್ಪತ್ತೈದು ವೈವಿಧ್ಯಮಯವಾದ ಶಕ್ತಿಶಾಲಿ ಕೃತಿಗಳನ್ನು ರಚಿಸಿ ಸೈ ಎನಿಸಿಕೊಂಡ ಹಿರಿಮೆ ನಮ್ಮ ಭೈರಪ್ಪನವರದು. ಹಿಂದಿ ಸಾಹಿತ್ಯಾಭಿಮಾನಿಗಳು, ವಿದ್ವಾಂಸರು ಅವರನ್ನು 'ಕಾವೇರಿ ತೀರದ ಈ ಲೇಖಕ ಗಂಗಾನದಿ ತೀರದ ನಮ್ಮ ಕಥೆಯನ್ನು ಬರೆದಂತಿದೆ' ಎಂಬುದಾಗಿ ಕೊಂಡಾಡಿರುವುದು ಸಾಮಾನ್ಯದ ಮಾತಲ್ಲ.ದೇಶ ವ್ಯಾಪಿ ಅವರ ಅಭಿಮಾನಿಗಳು ಇದ್ದಾರೆ ಎಂಬುದು ಅಚ್ಚರಿ ಅನಿಸಿದರೂ ಇದು ವಾಸ್ತವ.

ಸಾಂಪ್ರತ ಭಾರತದ ಜನಪ್ರಿಯ ಲೇಖಕರಲ್ಲಿ ಭೈರಪ್ಪ ಅವರೂ ಒಬ್ಬರು ಎಂಬುದು ಎಲ್ಲರೂ ಒಪ್ಪಿಕೊಳ್ಳುವ ಸಂಗತಿ. ಜನಪ್ರಿಯ ಲೇಖಕರನ್ನು ವಿಮರ್ಶೆಯ ವಲಯವು ಸದಾ ಗುಮಾನಿಯಿಂದಲೇ ನೋಡುತ್ತಾ ಬಂದಿದೆ. ಭೈರಪ್ಪನವರ ಸ್ಫೋಪಜ್ಞತೆಗೆ ಓದುಗರು ಮಾರುಹೋಗಿದ್ದಾರೆ. 'ಭೈರಪ್ಪನವರು ಸಮಕಾಲೀನ ಕನ್ನಡ ಕಾದಂಬರಿಕಾರರಲ್ಲಿ ಮುಖ್ಯರೆನಿಸುವುದು ಎರಡು ಕಾರಣಗಳಿಂದ; ಅವರು ಬರೆದಿರುವ ಕೃತಿಗಳು ಮಹತ್ವವಷ್ಟೇ ಅಲ್ಲ. ಬಹುತೇಕವಾಗಿ ಜನಪ್ರಿಯವೂ ಆಗಿವೆ. ಗಂಭೀರ ಲೇಖಕರು ಹೀಗೆ ಜನಪ್ರಿಯರಾಗುವುದು ಸಾಹಿತ್ಯದಲ್ಲಿ ತುಸು ಅಪರೂಪದ ಸಂಗತಿಯೇ. ಸಾಮಾನ್ಯವಾಗಿ ಅವರ ಎಲ್ಲ ಕಾದಂಬರಿಗಳು ಅನೇಕ ಮುದ್ರಣಗಳನ್ನು ಕಂಡಿರುವುದು ಅವರ ಜನಪ್ರಿಯತೆಗೆ ಸಾಕ್ಷಿ.

ಭೈರಪ್ಪನವರ ಮೊದಲನೆಯ ಘಟ್ಟದ ಕಾದಂಬರಿಗಳಂತೂ ಹತ್ತಾರು ಬಾರಿ ಮುದ್ರಣವಾಗಿವೆ. ಅಚ್ಚರಿಯ ಮಾತೆಂದರೆ ಅವರ ಸಾಹಿತ್ಯ ಚಿಂತನದಂಥ ಜಟಿಲ ವಸ್ತುವಿರುವ ಗ್ರಂಥಗಳು ಕೂಡಾ ಹಲವು ಬಾರಿ ಪುನರ್ಮುದ್ರಿತವಾಗಿವೆ. ಕನ್ನಡ ಕಾದಂಬರಿಗಳು ಸೋದರ ಭಾಷೆಗಳಿಗೆ ಅಂದರೆ ತಮಿಳು, ತೆಲುಗು, ಮಲಯಾಳಂಗೆ ಭಾಷಾಂತರವಾಗಿರುವ ಸಾಕಷ್ಟು ಉದಾಹರಣೆಗಳುಂಟು. ಕೆಲವೊಮ್ಮೆ ಭಾರತದ ಬೇರೆ ಬೇರೆ ಭಾಷೆಗಳಿಗೆ ಅನುವಾದವಾಗಿ ಆ ಪ್ರದೇಶಗಳಲ್ಲಿಯೂ ಜನಮನ್ನಣೆಯನ್ನು ಪಡೆದಿವೆ. ಗೃಹಭಂಗ ಮತ್ತು ದಾಟು ಎಲ್ಲ ಭಾರತೀಯ ಭಾಷೆಗಳಿಗೂ ಅನುವಾದವಾಗಿವೆ. ಕೆಲವು ಪ್ರದೇಶಗಳಿಗೆ ಭೈರಪ್ಪನವರು ಪ್ರವಾಸ ಹೋಗಿರುವ ಸಂದರ್ಭದಲ್ಲಿ ಈ ಅನುವಾದಗಳನ್ನೋದಿದ ಜನ ಆ ಮೂಲಕವೇ ಅವರನ್ನು ಗುರುತಿಸಿರುವ ಪ್ರಸಂಗಗಳೂ ಇಲ್ಲದಿಲ್ಲ' ಎಂಬುದಾಗಿ ದೇಶ ಕುಲಕರ್ಣಿ ಅವರು ಹೇಳಿರುವ ಮಾತು ಅವಲೋಕನೀಯವಾಗಿದೆ.

ತಮ್ಮ ಸುತ್ತಲಿನ ಸಮಾಜದ ತವಕ ತಲ್ಲಣಗಳಿಗೆ ಕಾದಂಬರಿಗಳಲ್ಲಿ ಧ್ವನಿ ನೀಡಿದ ಶ್ರೇಯಸ್ಸು ಭೈರಪ್ಪನವರಿಗೆ ಸಲ್ಲುತ್ತದೆ. ಅವರು ಬರೆದ ಹೆಚ್ಚಿನ ಕಾದಂಬರಿಗಳು ಉಸಿರು ಬಿಗಿ ಹಿಡಿದು ಓದುವಂಥ ಆಕರ್ಷಣೆ, ನಿರೂಪಣೆ, ತಂತ್ರಗಳನ್ನು ಹೊಂದಿರುವುದನ್ನು ನಾವು ಕಾಣಬಹುದು. ಕನ್ನಡ ವಿಮರ್ಶೆ ಭೈರಪ್ಪನವರ ಕೃತಿಗಳನ್ನು ಸರಿಯಾಗಿ ಅಳೆದು ತೂಗಿ ನೋಡಿಲ್ಲ. ಅವರ ಜನಪ್ರಿಯತೆಗೆ ಕೆಲವು ಕನ್ನಡ ವಿಮರ್ಶಕ ಮಹಾಶಯರು ಮತ್ಸರ ಪಟ್ಟದ್ದೂ ಉಂಟು. ಆದರೆ ಇದಾವುದಕ್ಕೂ ಭೈರಪ್ಪನವರು ಸೊಪ್ಪು ಹಾಕಿದವರಲ್ಲ.

'ಪರ್ವ' ಕಾದಂಬರಿಯು ಭಾರತದ ಹೆಚ್ಚಿನ ಭಾಷೆಗಳಿಗೆ ಅನುವಾದವಾಗಿ ಬಹಳ ಚರ್ಚೆಗೂ ಇಂಬು ನೀಡಿದೆ. ಈ ಕುರಿತು ದೇಶ ಕುಲಕರ್ಣಿ ಅವರು ಹೇಳಿರುವ ಮಾತು ಬಹಳ ಮುಖ್ಯ. "ಪರ್ವ ಕಾದಂಬರಿಯ ಬಗೆಗಿನ ಒಂದು ಉಲ್ಲೇಖವು ಇಲ್ಲಿ ಸಂಗತವೆನಿಸುತ್ತದೆ. ಸುಮಾರು ಮೂವತ್ತು ವರ್ಷದ ಹಿಂದೆ ಭಾರತೀಯ ಭಾಷೆಗಳಲ್ಲಿನ ಆಗಿನ ದಶಕದ ಸಾಹಿತ್ಯವನ್ನು ಕುರಿತಾಗಿ ದಿಲ್ಲಿಯಲ್ಲಿ ಎನ್. ಬಿ. ಟಿ. ಆಶ್ರಯದಲ್ಲಿ ವಿಚಾರ ಸಂಕಿರಣವೊಂದು ಏರ್ಪಾಡಾಗಿತ್ತು. ಕನ್ನಡ ಸಾಹಿತ್ಯದಿಂದ ಪ್ರತಿನಿಧಿಯಾಗಿ ಹೋದವರಲ್ಲಿ ಮಾತನಾಡಿದ ವಿಮರ್ಶಕರೊಬ್ಬರು 'ಪರ್ವ' ಕಾದಂಬರಿಯನ್ನು ಹೆಸರಿಸಲೇ ಇಲ್ಲ. ಆ ನಂತರದಲ್ಲಿ 'ಪರ್ವ'ದ ಪ್ರಸ್ತಾಪ ಬಂದಾಗ ಅಲ್ಲಿಗೆ ಬಂದಿದ್ದ ಬೇರೆ ಬೇರೆ ಭಾಷೆಯ ಪ್ರತಿನಿಧಿಗಳು ಅದರ ಮಹತ್ವವನ್ನು ಒಪ್ಪಿಕೊಂಡುದೇ ಅಲ್ಲದೆ, ಅದು ಕೇವಲ ಕನ್ನಡದ ಕೃತಿಯಲ್ಲ, ಇಡೀ ಭಾರತದ ಕೃತಿ ಎಂದು ಮುಂತಾಗಿ ಉದ್ಗರಿಸಿದ್ದರಂತೆ.ಪರ್ವ ಕಾದಂಬರಿಯ ಅನುವಾದವನ್ನು ಅವರು ತಂತಮ್ಮ ಭಾಷೆಗಳಲ್ಲಿ ಆಗಾಗಲೇ ಓದಿಕೊಂಡಿದ್ದರು. ನೇಪಾಳಿಯ ಕೆಲವು ಲೇಖಕರು ಹಿಂದಿ ಅನುವಾದಗಳನ್ನು ಓದಿ ಭೈರಪ್ಪನವರನ್ನು ಗುರುತಿಸುತ್ತಾರೆ. ಇಂಗ್ಲೆಂಡಿನ ಅನೇಕ ಮೇಧಾವಿಗಳು ಮತ್ತು ಗಂಭೀರ ಓದುಗರು ವಂಶವೃಕ್ಷದಲ್ಲಿನ ಆಳದಲ್ಲಿ ತಮ್ಮ ಕೆಲವು ಸಮಸ್ಯೆಗಳ ಬೇರು ಇರುವುದನ್ನು ಕಂಡುಕೊಂಡಿದ್ದಾರೆ. ಮಹಾರಾಷ್ಟ್ರದಲ್ಲಿಯಂತು ಭೈರಪ್ಪನವರನ್ನು ಕನ್ನಡದಲ್ಲಿ ಬರೆಯುವ ಅತ್ಯಂತ ಜನಪ್ರಿಯ ಮರಾಠಿ ಲೇಖಕರು ಎಂದು ತುಸು ವಿನೋದದಲ್ಲಿ ಪರಿಗಣಿಸಿ ಅಲ್ಲಿಯ ರಸಿಕರು ಪ್ರಶಂಸಿಸಿದ್ದಾರೆ"

ಪರ್ವ' ಒಂದು ಅಮರ ಕೃತಿ. ಇದು ಮಹಾಕಾವ್ಯದಂತಹ ಕಥಾನಕವುಳ್ಳ ಕಾದಂಬರಿ. ಕೆಲವು ದಶಕಗಳ ಹಿಂದೆ ಬೆಳಕು ಕಂಡ ಈ ಮಹಾ ಕಾದಂಬರಿಯ ಜನಪ್ರಿಯತೆ ಇಂದಿಗೂ ಏಕಪ್ರಕಾರವಾಗಿ ಉಳಿದು ಬಂದಿದೆ. ಡಾ. ಭೈರಪ್ಪ ವಿರಚಿತ ಪರ್ವ, ಮಂದ್ರ, ದಾಟು ಕೃತಿಗಳು ಕಾದಂಬರಿ ಜಗತ್ತಿನ ಅಭಿಜಾತ ಕೃತಿಗಳ ಸಾಲಿನಲ್ಲಿ ನಿಲ್ಲುವಂಥವುಗಳು. ಈ ಕೃತಿಗಳಲ್ಲಿ ಅವರು ಕಾಣಿಸಿರುವ ಜೀವನ ದರ್ಶನ ಓದುಗರು ಆತ್ಮಶೋಧನೆ ಮಾಡಿಕೊಳ್ಳುವಂತೆ ಇರುವುದು ವಿಶೇಷ. ವಿಶ್ವದ ಮಹಾನ್ ಕಾದಂಬರಿಕಾರರ ಜೊತೆಗಿಟ್ಟು ಅವರ ಕೃತಿಗಳನ್ನು ತೂಗಿ ನೋಡಬಹುದಾಗಿದೆ.

ಆಧುನಿಕ ಕನ್ನಡ ಕಾದಂಬರಿ ಪ್ರಪಂಚದಲ್ಲಿ ಭೈರಪ್ಪನವರದು ವಿಶಿಷ್ಟವಾದ ಸ್ಥಾನ. ಅವರ ಪ್ರಖರವಾದ ವಿಚಾರಶೀಲತೆ, ಜೀವನಾನುಭವದ ಪರಿಪಾಕ ಇವುಗಳಿಂದ ಮೂಡಿಬಂದ ಅವರ ಕಾದಂಬರಿಗಳು ಬದುಕಿನ ನಿಜ ಮೌಲ್ಯಗಳ ಜಿಜ್ಞಾಸೆಗೆ ತೊಡಗಿ ಯಶಸ್ವಿಯಾಗಿವೆ ಎಂಬ ಹಿರಿಯ ವಿಮರ್ಶಕ ಡಾ.ಜಿ.ಎಂ.ಹೆಗಡೆ ಅವರ ಮಾತು ಗಮನೀಯವಾಗಿದೆ.

ಸ್ವಾತಂತ್ರ್ಯೋತರ ಭಾರತದಲ್ಲಿ ಆದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಪಲ್ಲಟಗಳನ್ನು ಪರಿವರ್ತನೆಗಳನ್ನು ತಮ್ಮ ಕಾದಂಬರಿಗಳಲ್ಲಿ ದಾಖಲಿಸಿ ವಿಶ್ಲೇಷಿಸಿರುವ ಭೈರಪ್ಪನವರ ಕಲೆಗಾರಿಕೆ ಮೆಚ್ಚುವಂತಹದು. ಸಮೃದ್ಧವಾದ ಜೀವನಾನುಭವ, ಸಂಪನ್ನವಾದ ಸಾಂಸ್ಕೃತಿಕ ವಿವರ, ಪ್ರಬುದ್ಧವಾದ ಜೀವನ ದೃಷ್ಟಿ, ಗಟ್ಟಿಯಾದ ವೈಚಾರಿಕತೆ ಗಳಿಂದ ಅವರ ಕಾದಂಬರಿಗಳು ಬಹು ಕಾಲ ನಿಲ್ಲಬಲ್ಲ ತಾಕತ್ತನ್ನು ಹೊಂದಿವೆ.

ಭೈರಪ್ಪನವರು ಒಬ್ಬ ಮಹಾನ್ ಲೇಖಕರು. ಅವರ ಕಾದಂಬರಿಗಳು ಮರೆಯಲಾಗದಂತಹ ಕತೆ, ಸನ್ನಿವೇಶ, ಪಾತ್ರ ಚಿತ್ರಣ, ನಿರೂಪಣೆ ಶೈಲಿ, ವೈಚಾರಿಕತೆ, ಜೀವನದ ಅನ್ವೇಷಣೆಗಳಿಂದ ಸಾರ್ವಕಾಲಿಕ ಮಹತ್ವವನ್ನು ಪಡೆದುಕೊಂಡಿವೆ. ಮನುಷ್ಯನ ತೊಳಲಾಟಕ್ಕೆ ಕಾರಣಗಳನ್ನು ತತ್ವಶಾಸ್ತ್ರದ ಒಳನೋಟಗಳ ಹಿನ್ನೆಲೆಯಲ್ಲಿ ತಾಳೆಹಾಕಿ ವಿವೇಚಿಸಿರುವುದು ಅವರ ಕೃತಿಗಳ ಅತಿಶಯತೆ. ಇಂದಿಗೂ ಅಪಾರವಾದ ಜನಪ್ರಿಯತೆಯನ್ನು ಉಳಿಸಿಕೊಂಡ ಅವರ ಹೆಚ್ಚಿನ ಕೃತಿಗಳು ಮತ್ತೆ ಮತ್ತೆ ಹತ್ತು ಹಲವು ಮುದ್ರಣಗಳನ್ನು ಕಾಣುತ್ತ ಜಗತ್ತಿನಾದ್ಯಂತ ಸಾಹಿತ್ಯ ಪ್ರಿಯರ ಮೆಚ್ಚುಗೆಗೆ ಶ್ಲಾಘನೆಗೆ ಪಾತ್ರವಾಗುತ್ತಿವೆ. ಭೈರಪ್ಪನವರು ನೇರ ನಡೆನುಡಿಗೆ ಹೆಸರಾದವರು. ಮಾತು ಕೃತಿಗಳ ನಡುವೆ ಎರಡಿಲ್ಲದ ಬಾಳ್ವೆ ಅವರದು. ಅವರು ಋಜು ಸ್ವಭಾವದ ಸಾತ್ವಿಕರು; ಹಾಗೆಯೇ ತಮಗೆ ಸರಿ ಕಂಡದ್ದನ್ನು ಪ್ರತಿಪಾದಿಸುವ ಎದೆಗಾರಿಕೆಯುಳ್ಳ ಧೈರ್ಯಶಾಲಿಗಳೂ ಆಗಿದ್ದರು

ಭಾರತೀಯ ಸಂಸ್ಕೃತಿಯ ಉದಾತ್ತ ಆದರ್ಶಗಳನ್ನು ಭೈರಪ್ಪನವರು ತಮ್ಮ ಬರವಣಿಗೆಯಲ್ಲಿ ಶೋಧಿಸಿ ಅನಾವರಣಗೊಳಿಸಿರುವ ಪರಿ ಭಿನ್ನ, ಅಷ್ಟೇ ಮನೋಜ್ಞವಾಗಿದೆ.

ಕನ್ನಡ ಕಾದಂಬರಿ ಜಗತ್ತಿನ ಕೇಂದ್ರ ಪರಂಪರೆಯಾದ ವಾಸ್ತವವಾದ ಮಾರ್ಗವನ್ನು ಮತ್ತಷ್ಟು ವಿಸ್ತರಿಸಿ ವೈವಿಧ್ಯತೆಯನ್ನು ಹೆಚ್ಚಿಸಿದ ಹಿರಿಮೆ ಭೈರಪ್ಪನವರಿಗೆ ಸಲ್ಲುತ್ತದೆ. ನಮ್ಮ ಸಮಾಜದ ಓರೆಕೋರೆಗಳನ್ನೆಲ್ಲ ಅವರು ನಿರ್ಭೀತಿಯಿಂದ ಹೇಳಿದ್ದಾರೆ. ಕಾದಂಬರಿಯ ನೆಲೆಯನ್ನು ಮೊದಲಬಾರಿಗೆ ವೈಚಾರಿಕತೆಯ ಹಿನ್ನೆಲೆಯಲ್ಲಿ ಗುರುತಿಸಿದ ಆಂಗ್ಲ ಚಿಂತಕ ಕಿರ್ಕೆಗಾರ್ಡ್ ಹೇಳಿರುವ "ಪ್ರತಿಯೊಂದು ಯುಗದ ಸಮಗ್ರತೆ ಕಾದಂಬರಿಯ ನೆಲೆಯಾಗಿರುತ್ತದೆ. ಅದು ಈ ಸಮಗ್ರತೆಯನ್ನು ಸಾಂಸಾರಿಕ ಜೀವನದಲ್ಲಿ ಶೋಧಿಸುತ್ತದೆ" ಎಂಬ ಮಾತು ಭೈರಪ್ಪನವರ ಕಾದಂಬರಿಗಳಿಗೆ ಚೆನ್ನಾಗಿ ಅನ್ವಯಿಸುತ್ತದೆ. ಭೈರಪ್ಪನವರ ಹೆಚ್ಚಿನ ಕಾದಂಬರಿಗಳು ನಮ್ಮ ಸಂಸ್ಕೃತಿಯ ಆಳದಲ್ಲಿ ನಡೆದಿರುವ ಸಂವಾದಗಳನ್ನು ಬಹು ಸಲೀಸಾಗಿ ಮುಂದುವರಿಸಲು ಶಕ್ತವಾಗಿರುವುದು ಗಮನೀಯ ಅಂಶ. ಅವರು ಕೇವಲ ಅನುಕರಣಶೀಲ ಲೇಖಕರಾಗದೇ ಭಾರತೀಯ ನೆಲೆಯಲ್ಲಿ ತಾತ್ವಿಕ ವಿಷಯಗಳನ್ನು ಎತ್ತಿಕೊಂಡು ಸಾಂಸ್ಕೃತಿಕ ಸಂವಾದವನ್ನು ನಡೆಸಿರುವುದು ಗಮನೀಯ.

ಭೈರಪ್ಪನವರಿಗೂ ಮುಂಬಯಿಗೂ ಅವಿನಾಭಾವ ಸಂಬಂಧವಿತ್ತು. ಅವರು ಮತ್ತೆ ಮತ್ತೆ ಮುಂಬಯಿಗೆ ಬಂದು ಹೋಗಿದ್ದಾರೆ.ಮಹಾರಾಷ್ಟ್ರದಲ್ಲಿ ಮರಾಠಿಯಲ್ಲಿ ಅವರಿಗೆ ಅಪಾರವಾದ ಓದುಗ ವರ್ಗವಿದೆ. ಮುಂಬಯಿ ವಿಶ್ವವಿದ್ಯಾಲಯದ ಹಾಗೂ ಕನ್ನಡ ವಿಭಾಗದ ಕಾರ್ಯಕ್ರಮಗಳಲ್ಲಿಯೂ ಅವರು ಅನೇಕ ಬಾರಿ ಉಪನ್ಯಾಸ ನೀಡಿ ಈ ಭಾಗದ ಸಹೃದಯರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು. 'ಸಾಕ್ರಟೀಸ್ ಬದುಕಿರುವಂಥ ಸಂದರ್ಭದಲ್ಲಿ ನಾನು ಬದುಕಿದ್ದೇನೆ" ಎಂದು ಬೊಕನ್ ಒಂದು ಕಡೆ ಹೇಳಿದ್ದಾನೆ. ನಾವು ಸಹ "ಭೈರಪ್ಪ ಅವರನ್ನು ಹತ್ತಿರದಿಂದ ಕಂಡಿದ್ದೇವೆ, ಅವರ ಮಾತುಗಳನ್ನು ಕೇಳಿ ಪುಳಕಗೊಂಡಿದ್ದೇವೆ. ಅವರು ಬದುಕಿರುವಾಗ ನಾವು ಬದುಕಿದ್ದೆವು. ಇದು ನಮ್ಮ ಪುಣ್ಯ" ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು.

"ಪೂರ್ವ ಪೂರ್ವವೇ, ಪಶ್ಚಿಮ ಪಶ್ಚಿಮವೇ. ಎರಡೂ ಎಂದಾದರೂ ಸಂಧಿಸುವುದುಂಟೆ? ಇಲ್ಲ" ಎನ್ನುತ್ತಾನೆ ಲೇಖಕ ಕಿಪ್ಲಿಂಗ್. ಆದರೆ ನಮ್ಮ ಭೈರಪ್ಪನವರು ತಮ್ಮ ಅಪಾರವಾದ ಪ್ರತಿಭೆಯಿಂದ ಸತ್ವ ಪೂರ್ಣ ಕೃತಿಗಳಿಂದ ಭಾಷೆಗಳ ಗಡಿ ಗೆದ್ದ ಭಾರತೀಯ ಎಂದೇ ಲೋಕ ವಿಖ್ಯಾತರಾಗಿದ್ದರು. ಮಾನವೀಯ ಅನುಭವದ ವ್ಯಾಪ್ತಿ,ವೈವಿಧ್ಯ, ಆಳವಾದ ಅಭಿವ್ಯಕ್ತಿ ಹಾಗೂ ಜೀವಂತಿಕೆಗಳಿಂದ ಕೂಡಿರುವ ಅವರ ಹಲವು ಕೃತಿಗಳು ಮೇಲ್ತರಗತಿಯದಾಗಿವೆ.

ಭೈರಪ್ಪನವರ ಕಾದಂಬರಿಗಳಲ್ಲಿ ಏಕೀಕೃತವಾಗಿ ಮೂಡಿರುವ ಭಾರತೀಯ ಸಂಸ್ಕೃತಿಯ ಚಿತ್ರಣವನ್ನು ಬಹು ಭಾಷಿಕ ನೆಲೆಯಲ್ಲಿ ತೌಲನಿಕವಾಗಿ ಅಧ್ಯಯನ ಮಾಡಿ ಅವರ ಕಾದಂಬರಿಗಳ ಅನನ್ಯತೆಯನ್ನು ಗುರುತಿಸಿದ ಹಿರಿಮೆ ಮುಂಬೈನ ಹಿರಿಯ ಲೇಖಕರಾದ ಡಾ.ಉಮಾ ರಾಮರಾವ್ ಅವರಿಗೆ ಸಲ್ಲುತ್ತದೆ. "ಭೈರಪ್ಪನವರ ಕಾದಂಬರಿಗಳ ಅನುವಾದದಿಂದಾಗಿ ಅವರು ಜಗದಗಲ ಬೆಳೆದಿರುವುದು ಅವರ ಸಾಹಿತ್ಯ ಪ್ರಭೆಯ ಒಂದು ಮುಖವಾದರೆ ಅವರ ಕೃತಿಗಳ ಸತ್ವದಿಂದಾಗಿ ಅವರು ವಿಶ್ವ ಸಾಹಿತಿಯ ಮಟ್ಟಕ್ಕೇರಿರುವುದು ಅವರ ಸಾಹಿತ್ಯ ಸಾಧನೆಯ ಇನ್ನೊಂದು ಮುಖ"ಎಂಬ ಮಾತಿನಲ್ಲಿ ಅತ್ಯುಕ್ತಿ ಇಲ್ಲ.ಕನ್ನಡದ ಬಣ್ಣ ಬನಿಯನ್ನು ವಿಶ್ವ ವಿಖ್ಯಾತಗೊಳಿಸಿದ ಡಾ. ಭೈರಪ್ಪ ಅವರಿಗೆ ಕನ್ನಡ ಜನತೆ ಸದಾ ಕೃತಜ್ಞರು.

●

## ಕನ್ನಡ ಕಣ್ಮಣಿ ಡಾ. ಎಸ್. ಎಲ್. ಭೈರಪ್ಪ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

**– ನೇಸರು**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಎಸ್. ಎಲ್. ಬೈರಪ್ಪನವರದ್ದು ಎದ್ದು ಕಾಣುವ ಹೆಸರು. ಜನಮಾನಸದಲ್ಲಿ ಅಚ್ಚಳಿತಯುದೆ ಉಳಿಯುವಂತಹ ಅಮೋಘವಾದ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಪ್ರಸಕ್ತ ವಿದ್ಯಮಾನಕ್ಕೆ ತಕ್ಕಂತೆ, ಜನಸಾಮಾನ್ಯರ ತಲ್ಲಣ, ಸಂವೇದನೆಗೆ ತಮ್ಮ ಕೃತಿಗಳ ಮುಖೇನ ಸ್ಪಂದಿಸಿದ್ದಾರೆ ಬೈರಪ್ಪನವರು. ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದ ಕೃತಿಗಳನ್ನು ರಚಿಸಿದ ಭೈರಪ್ಪನವರು ಅಪಾರ ಜನಮನ್ನಣೆಯನ್ನು ಪಡೆದಿದ್ದಾರೆ. ಸರ್ವಕಾಲಕ್ಕೂ ಸಲ್ಲುವ ಕೃತಿಗಳನ್ನು ರಚಿಸಿದ ಭೈರಪ್ಪನವರು, ಜನಪ್ರಿಯ ಸಾಹಿತಿ, ಜನಸಾಮಾನ್ಯರ ಸಾಹಿತಿ ಎಂಬ ಕೊಂಡಾಟಕ್ಕೂ ಪಾತ್ರರಾಗಿರೋದನ್ನು ಮರೆಯುವಂತಿಲ್ಲ. ಇವರ ಹಲವು ಕೃತಿಗಳು ಇಂಗ್ಲೀಷ್ ಸೇರಿದಂತೆ ಭಾರತದ ಇತರ ಭಾಷೆಗಳಿಗೆ ಅನುವಾದಗೊಂಡಿದೆ. ಜರ್ಮನ್, ಚೀನೀ ಹಾಗೂ ರಷ್ಯನ್ ಭಾಷೆಗಳಿಗೂ ಅನುವಾದಗೊಂಡಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ. ಅವರ ಪ್ರತಿಭೆಗೆ ಸಂದ ಪುರಸ್ಕಾರಗಳು ಅಪಾರ. ಅದರಲ್ಲಿ ಮುಖ್ಯವಾದವು ನಾಡೋಜ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಇತ್ಯಾದಿ. ಭೈರಪ್ಪನವರು ರಚಿಸಿದ ವಂಶವೃಕ್ಷ, ದಾಟು, ನಾಯಿನೆರಳು, ಧರ್ಮಶ್ರೀ, ಮತದಾನ, ಗೃಹಭಂಗ ಮೊದಲಾದ ಕಾದಂಬರಿಗಳು ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದೆ. ಅದರಲ್ಲಿ 'ಪರ್ವ' ಕಾದಂಬರಿ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡ ಕಾದಂಬರಿ. ಇಂತಹ ಅಮೂಲ್ಯವಾದ ರತ್ನವನ್ನು ಕಳೆದುಕೊಂಡು ಕನ್ನಡ ಸಾಹಿತ್ಯ ಲೋಕ ಬಡವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಅಗಲಿದ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಮನಸಾ ಹಾರೈಸುತ್ತೇವೆ.

–

# ಮೈಸೂರು ಅಸೋಸಿಯೇಷನ್, ಮುಂಬಯಿ

## ಭಾರತೀಯ ವಿದ್ಯಾ ಭವನ ಬೆಂಗಳೂರು

### ಇವರ ಜೊತೆಗೂಡಿ

# ಬೆಂಗಳೂರಿನಲ್ಲಿ ಶತಮಾನೋತ್ಸವದ ಸಂಭ್ರಮ




✍ ಡಾ. ಗಣಪತಿ ಶಂಕರಲಿಂಗ್



ಬೆಂಗಳೂರಿನಲ್ಲಿ ನಮ್ಮ ಹಲವಾರು ಸದಸ್ಯರು ನೆಲೆಸಿದ್ದಾರೆ. ಆದ್ದರಿಂದ ನಾವು ಈ ಶತಮಾನೋತ್ಸವದ ಸಂಭ್ರಮವನ್ನು ಅಲ್ಲಿಗೂ ಕೊಂಡೊಯ್ಯ ಬೇಕೆಂದು ನಮ್ಮೆಲ್ಲರ ಗುರಿಯಾಗಿತ್ತು. ಈ ನಿಟ್ಟಿನಲ್ಲಿ ನಮ್ಮ ಹಿರಿಯ ಸದಸ್ಯರು, ಜೂನ್ ತಿಂಗಳಿಂದ ನಮ್ಮ ಸದಸ್ಯರನ್ನೆಲ್ಲಾ ಕೂಡಿಸಿ, ಅವರನ್ನು ಈ ಕೆಲಸದಲ್ಲಿ ನಿರಂತರ ತೊಡಗಿಸಿದರು. ಶ್ರೀಯುತ ರವಿಶಂಕರ್, ಸುಧೀಂದ್ರ್, ಅಮೃತ ದೇಸಾಯಿ, ರಂಗಪ್ರಸಾದ್, ಶ್ರೀಮತಿ ರಮಾ ವೆಂಕಟೇಶ್, ಶಾರ್ವರಿ, ಸುಧಾ ಶ್ರೀನಿವಾಸ್ ಮುಂತಾದವರು ಮುಂದಾಳುತನವನ್ನು ಹೊತ್ತು, ಕಾರ್ಯ ಕ್ರಮಗಳನ್ನೂ ಹಾಗೆಯೇ ಜನರನ್ನು ಒಗ್ಗೂಡಿಸುವುದರ ಹೊಣೆಯನ್ನು ಹೊತ್ತರು. ಅಕ್ಟೋಬರ್ 05, 2025ರಂದು ಈ ಕಾರ್ಯಕ್ರಮ ನಿಶ್ಚಯವಾಯಿತು.

ಭಾರತೀಯ ವಿದ್ಯಾಭವನದವರು ತಾವೇ ಮುಂದೆ ಬಂದು ನಮಗೆ ತಮ್ಮ ಆ ಸಭಾಂಗಣವನ್ನು ನೀಡಿದರು. ಅದಕ್ಕಾಗಿ ನಾವು ಚಿರಋಣಿಗಳಾಗಿದ್ದೇವೆ. ಅಂತೆಯೇ ಶ್ರೀಮತಿ ಪ್ರಜ್ಞಾ ಪ್ರಚಾರದ ಹೊಣೆಯನ್ನು ಹೊತ್ತರು.

ಬೆಳಗಿನಿಂದ ಹೊತ್ತು ಮುಳುಗಿದ ಮೇಲೂ ಕಾರ್ಯ ಕ್ರಮಗಳನ್ನು ಈ ತಂಡ ನಿರ್ಮಿಸಿತು. ಅಸೋಸಿಯೇಷನ್ ಸವಿನೆನಪು ಈ ಎಲ್ಲಾ ಸದಸ್ಯರನ್ನೂ ಬಿಡಿಸಲಾಗದ ಅಂಟಾಗಿತ್ತು. ಅಸೋಸಿಯೇಷನ್ನಿನಲ್ಲಿಯೇ ತಾವು ಕಲಿತ ರಂಗ ಗೀತೆಗಳನ್ನು ಹಾಡುವ, ನಟಿಸುವ ಕೆಲಸವನ್ನು ಹನ್ನೊಂದು ಮಂದಿ ಹೊತ್ತು, ಬೆಂಗಳೂರು ನಗರದಲ್ಲಿ ಪ್ರತಿದಿನವೂ ರಿಹರ್ಸಲ್ ನಡೆಸಿದ್ದುದು ಹೊಗಳಿಕೆಗೆ ಪಾತ್ರವಾಗಿತ್ತು.





ಅಂತೆಯೇ ಸುಧಾ ಶ್ರೀನಿವಾಸ್, ತನ್ನ ಗಾರುಡಿಯಲ್ಲಿ ಕಲಿಯುತ್ತಿರುವ ಎಲ್ಲಾ ಎಳೆಯರಿಗೂ ನೃತ್ಯವನ್ನೂ ಕಲಿಸಿ ಅವರಿಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಿದರು. ಇದಕ್ಕಾಗಿ ಅವರೆಲ್ಲರಿಗೂ ಎರಡು ತಿಂಗಳ ತರಬೇತಿ.









ಇನ್ನು ನಮ್ಮವರೇ ಅದ ವೈ. ವಿ. ಗುಂಡೂರಾವ್ ತಮ್ಮ ಹಾಸ್ಯ ಕಿರಣವನ್ನು ಪಸರಿಸುವ ಹೊಣೆಗಾರಿಕೆಯನ್ನು ಹೊತ್ತರು. ಬೆಂಗಳೂರಿನ ರಂಗಭೂಮಿಯಲ್ಲಿ ಹೆಸರು ಮಾಡಿರುವ ಶ್ರೀ. ರಂಗನಾಥ್ ಕೂಡ ಕೈಲಾಸಂ ನಾಟಕವೊಂದನ್ನು ಮಾಡುವ ಹೊಣೆ ಹೊತ್ತರು.

ಒಂದು ಶತಮಾನದಲ್ಲಿ ಅಸೋಸಿಯೇಷನ್‌ನನ್ನು ಕಟ್ಟಿ ಬೆಳೆಸಿದ ಅನೇಕ ದಿಗ್ಗಜರುಗಳಿದ್ದಾರೆ. ಅವರನ್ನು ಈಗ ನಾವು ನೆನೆಯಲೇಬೇಕು. ಅವರಿಲ್ಲದಿದ್ದರೆ ಈಗ ನಮ್ಮ ಮೈಸೂರು ಅಸೋಸಿಯೇಷನ್ ಇರುತ್ತಲೇ ಇರಲಿಲ್ಲ. ಅವರಿಗೆ ಸನ್ಮಾನ ಮಾಡುವ ಕಾರ್ಯವನ್ನು ನಾವು ಈ ಸಂದರ್ಭದಲ್ಲಿ ಹೊತ್ತೆವು.





ಇಷ್ಟು ಕಾರ್ಯಕ್ರಮಗಳನ್ನು ರೂಪಿಸಿದರೆ, ಅದನ್ನು ರಂಗದ ಮೇಲೆ ಸಿಹಿಯಾಗಿ ಹಂಚುವ ಕೆಲಸ ಕಠಿಣ. ಆದರೆ ನಮ್ಮ ಮನಸ್ಸೋ ಅಷ್ಟೇ ಕಲ್ಲಿನಂತದ್ದು. ಮಾಡಲೇಬೇಕೆಂದು ಹೊರಟ ಮೇಲೆ ಅದನ್ನು ಕೈಗೂಡಿಸುವುದು ನಮ್ಮ ಹೊಣೆ.

ಎಲ್ಲದಕ್ಕಿಂತ ಹೆಚ್ಚಾಗಿ ಪ್ರಚಾರ. ಇದರಲ್ಲಿ ಅನೇಕ ಸದಸ್ಯರೂ ಹಾಗೆಯೇ ನಮ್ಮ ಅಧ್ಯಕ್ಷರು, ಶ್ರೀಮತಿ ಕಮಲಾ ಅವರೂ ತೊಡಗಿದರು. ಪತ್ರಿಕೆಗಳಲ್ಲಿ, ಫೇಸ್ಬುಕ್ ಇನ್‌ಸ್ಟಾಗ್ರಾಮ್‌ಗಳಲ್ಲಿ ಪ್ರಚಾರ ಸತತವಾಗಿ ನಡೆಯಿತು. ಅಸೋಸಿಯೇಷನ್ ಮುಂಬಯಿ ಕಾರ್ಯಾಲಯದಿಂದ ಹನ್ನೊಂದು ಮಂದಿ ಹಾಗೂ





ನಮ್ಮೊಡನೆ ಸದಾ ದುಡಿಯುತ್ತಿರುವ ನಮ್ಮ ಕಾರ್ಯತಂಡ ಬೆಂಗಳೂರಿಗೆ ಮುಂಚಿತವಾಗಿಯೇ ಬಂದು, ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವುದರಲ್ಲಿ ತೊಡಗಿದರು.





ದೂರದರ್ಶನದ ಶ್ರೀ ಶ್ರೀನಿವಾಸ್‌ರವರು ತಮ್ಮ ನಲುವಿನಿಂದ, ಸಭಾ ಕಾರ್ಯಕ್ರಮ ರೂಪಿಸುವ ಜರುಗಿಸುವ ಹೊಣೆಯನ್ನು ಹೊತ್ತಿದ್ದು ನಮ್ಮ ಸೌಭಾಗ್ಯ.

ಅಕ್ಟೋಬರ್ 05ರಂದು ಬೆಳಗಾಗುವ ಮುನ್ನವೇ ಭಾರತೀಯ ವಿದ್ಯಾಭವನದಲ್ಲಿ ಕೆಲಸ ಮೊದಲಾಯಿತು. ಇಪ್ಪತ್ತು ಮಂದಿ ಅಸೋಸಿಯೇಷನ್ನಿನ ಸದಸ್ಯರು ಅಂತೆಯೇ ಇನ್ನು 6 ಮಂದಿ ವಿದ್ಯಾಭವನದ ಕೆಲಸಗಾರರು, ರಂಗವನ್ನು ಸಿಂಗರಿಸಿ, ಅಣಿಯಾದರು.

ಮುಖ್ಯ ಅತಿಥಿಗಳಾದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಮನು ಬಳಿಗಾರ್ ಅವರು ಮುಂಚಿತವಾಗಿ ಬಂದು ನಮ್ಮನ್ನು ಹುರಿದುಂಬಿಸಿದರು. ನಾವು ಸನ್ಮಾನ ಮಾಡಬೇಕೆಂದಿರುವವರು ಈಗ ಬಹಳ ಮಂದಿ ನಮ್ಮೊಂದಿಗಿಲ್ಲ. ಆದರೆ ಅವರ ಕುಟುಂಬದವರು ಇದ್ದಾರೆ. ಅವರೆಲ್ಲರೂ ಮುಂಚಿತವಾಗಿಯೇ





ಬಂದು ಸೇರಿದರು. ನಮ್ಮ ಮೊದಲ ಎಣಿಕೆ 200 ಮಂದಿ ನೋಡುಗರು ಬರಬಹುದೆಂದಿತ್ತು. ಆದರೆ 425 ಮಂದಿ ಬಂದು ಕೂಡಿದ್ದರು. ಅದರಲ್ಲಿ 75 ವಯಸ್ಸಿನ ಮೇಲಿರುವವರೇ 100 ಮಂದಿ ಸೇರಿದ್ದರು. ಅಸೋಸಿಯೇಷನ್‌ನಲ್ಲಿ ಅವರು ಕೂಡಿ ಬೆಳೆದ ನೆನಪು ಅಚ್ಚಳಿಯದು.





ಕಾರ್ಯಕ್ರಮ ಚಿಕ್ಕ ಹುಡುಗಿ ಸಂಹಿತಾ ಭಾರದ್ವಾಜ್‌ಳ ಗಣಪತಿಯ ಪ್ರಾರ್ಥನೆ ಮಾಡುವುದರಿಂದ ಮೊದಲಾಯಿತು.

ಶ್ರೀ ಶ್ರೀನಿವಾಸರವರು, ಸಂದರ್ಭದ ಮಹತ್ವವನ್ನು ಗುರುತಿಸುತ್ತಾ, ಅಸೋಸಿಯೇಷನ್ ಗುರಿಯನ್ನು ಹೇಳಿ, ಕಾರ್ಯದರ್ಶಿಯಾಗಿರುವ ನನ್ನನ್ನು ಎಲ್ಲರನ್ನೂ ಸ್ವಾಗತಿಸುವ ಕೆಲಸಕ್ಕೆ ಹಚ್ಚಿದರು. ನಾನು ಬಂದ ಅತಿಥಿಗಳನ್ನು ಸ್ವಾಗತಿಸುತ್ತಾ, ಮೈಸೂರು ಅಸೋಸಿಯೇಷನ್ "ನಡೆದು ಬಂದ ದಾರಿ" ಅಥವಾ



"Foot Prints in Sand" ಎನ್ನುವ ವಿಡಿಯೋವನ್ನು ತೋರಿಸುವುದರಿಂದ ಮೊದಲು ಮಾಡಿದೆ.

ಅಸೋಸಿಯೇಶನ್ 1926ರಿಂದ ನಡೆದು ಬಂದು ಆ ನಂತರ ಒಂದು ಕನ್ನಡ ಸಾಂಸ್ಕೃತಿಕ ಕೇಂದ್ರವಾಗಿ ನಿಂತಿರುವುದನ್ನು ಇತಿಹಾಸವಾಗಿ ರೂಪಿಸುವ ಒಂದು ವಿಡಿಯೋವನ್ನು ತೋರಿಸಿದೆವು. ಈ ಚಿತ್ರ ಶ್ರೀ ಸುರೇಂದ್ರ ಮಾರ್ನಾಡ್ ಮಾಡಿಕೊಟ್ಟ ಒಂದು ಉಡುಗೊರೆ.

ಅದಾದ ಮೇಲೆ, ನಮ್ಮ ಅಧ್ಯಕ್ಷರು ನಮ್ಮ ಮುಖ್ಯ ಅತಿಥಿಗಳನ್ನು ರಂಗದ ಮೇಲೆ ಕರೆತಂದು ದೀಪೋಜ್ವಲನೆಯಿಂದ ಈ ಶತಮಾನೋತ್ಸವದ





ಶ್ರೀ ಶ್ರೀನಿವಾಸರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ನಮ್ಮ ಅಧ್ಯಕ್ಷರು ಶ್ರೀಮತಿ ಕಮಲಾ, ಉಪಾಧ್ಯಕ್ಷರು ಶ್ರೀ ಉಮೇಶ್ ಮಾಸ್ಕೇರಿ ಅವರು, ಮುಖ್ಯ ಅತಿಥಿಗಳನ್ನು ಸನ್ಮಾನ ಮಾಡಿದರು. ನಂತರ ಶ್ರೀ ವಿಠ್ಠಲಮೂರ್ತಿಯವರು ಮಾತನಾಡಿದರು. ಅವರು ಅಸೋಸಿಯೇಷನ್ನಿನ ಸಂಗಡ ತಮ್ಮ ನೆಂಟು, 35 ವರ್ಷಗಳಷ್ಟು ತಾವು ಸರ್ಕಾರದಲ್ಲಿ ಇದ್ದಾಗ ಅಥವಾ ಅದರ ನಂತರವಾಗಲಿ ಎಡೆಬಿಡದೆ ಅಸೋಸಿಯೇಷನ್ನಿನ ಜೊತೆಯಾಗಿ ಇದ್ದೇನೆ. ಅಸೋಸಿಯೇಷನ್ ಹೊರನಾಡಿನಲ್ಲಿ ಇದ್ದುಕೊಂಡು ಕನ್ನಡದ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಹೆಚ್ಚಿಸುವುದಕ್ಕಾಗಿ ದುಡಿಯುತ್ತಿದೆ, ಅದನ್ನು ನಾವೆಲ್ಲರೂ ಗುರಿತಿಸಬೇಕು ಎಂದರು.

ನಂತರ ಅಸೋಸಿಯೇಷನ್ನಿಗಾಗಿ ದುಡಿದ ಹಿರಿಯರನ್ನು ಇಲ್ಲವೇ ಅವರ ಮನೆಯವರಿಗೆ ಶಾಲನ್ನು ಹೊದಿಸಿ ನೆನಪಿನ ಕಾಣಿಕೆಯನ್ನು ಒಪ್ಪಿಸುವುದರ ಮೂಲಕ ಸನ್ಮಾನಿಸಲಾಯಿತು. ಹಿಂದಿನ ಅಧ್ಯಕ್ಷರಲ್ಲಿ 10 ಹಿರಿಯರ ಮಕ್ಕಳು ಮೊಮ್ಮಕ್ಕಳು ಬಂದಿ

1. ದಿವಾನ್ ಬಹಾದ್ದೂರ್ ರಾಮಸ್ವಾಮಿ ಪರವಾಗಿ ಶ್ರೀ ಸೂರ್ಯಕುಮಾರ್
2. ಶ್ರೀ ಬಿ. ವಿ.ಎಸ್. ಅಯ್ಯಂಗಾರ್ ಪರವಾಗಿ ಶ್ರೀಮತಿ ಶ್ರೀದೇವಿ ಅಯ್ಯಂಗಾರ್
3. ಶ್ರೀ ನಂಜುಂಡಯ್ಯ ಪರವಾಗಿ ಶ್ರೀಮತಿ ನಳಿನಿ ಮತ್ತು ಶ್ರೀಮತಿ ರೋಢಾ
4. ಶ್ರೀ ಸಿ. ಎಲ್. ಎನ್. ಅಯ್ಯಂಗಾರ್ ಪರವಾಗಿ ಶ್ರೀ ಕೃಷ್ಣ ಅಯ್ಯಂಗಾರ್
5. ಶ್ರೀ ಟಿ. ಎಸ್. ಚಂಪಕನಾಥ್ ಪರವಾಗಿ ಶ್ರೀಮತಿ ಅಂಜಲಿ
6. ಶ್ರೀ ಬಿ. ಎಸ್. ರಾಮರಾವ್ ಪರವಾಗಿ ಶ್ರೀ ಸತ್ಯನಾರಾಯಣ್ ರಾವ್
7. ಶ್ರೀ ರಾಮಲಿಂಗಂ ಪರವಾಗಿ ಶ್ರೀಮತಿ ಉಮಾ ರಾವ್
8. ಶ್ರೀ ನಾಗಭೂಷಣ ರಾವ್ ಪರವಾಗಿ ಶ್ರೀಮತಿ ಗೀತಾ ಸುಬ್ಬರಾವ್
9. ಶ್ರೀ ಎಂ. ಎಸ್. ಅಯ್ಯಂಗಾರ್ ಪರವಾಗಿ ಶ್ರೀಮತಿ ಪದ್ಮಾ ಸತ್ಯಮೂರ್ತಿ
10. ಶ್ರೀ ಎ. ಎಸ್. ಕೆ. ರಾವ್ ಪರವಾಗಿ ಶ್ರೀ ಗುರುದತ್ತ್ ರಾವ್



ಅನಂತರ ಅಸೋಸಿಯೇಷನ್ನಿನ ಕಾರ್ಯದರ್ಶಿಗಳಾಗಿ ನಿಸ್ಪೃಹ ಸೇವೆ ನಡೆಸಿದ 6 ಮಂದಿಗೆ ಸನ್ಮಾನ ಮಾಡಲಾಯಿತು.

1. ಶ್ರೀ ವಸಂತಕುಮಾರ್
2. ಶ್ರೀ ಸೋಮಸುಂದರ್
3. ಡಾ. ಎಚ್. ಎಸ್. ಶ್ರೀನಿವಾಸ್
4. ಶ್ರೀ ಎಂ. ಎ. ಮಧುಸೂದನ್













5. ಶ್ರೀ ಎಂ. ಎ. ಎನ್. ಪ್ರಸಾದ್ ಪರವಾಗಿ ಶ್ರೀಮತಿ ಭಾರತಿ ಪ್ರಸಾದ್
6. ಶ್ರೀ ಆರ್. ಎಸ್. ಕುಮಾರ್ ಪರವಾಗಿ ಶ್ರೀಮತಿ ಗೋದಾ ಕುಮಾರ್

ಕನ್ನಡ ಸಂಸ್ಕೃತಿಗೆ ಈಗಲೂ ಕೆಲಸ ಮಾಡುತ್ತಿರುವ 5 ಮಂದಿ ದಿಗ್ಗಜರಿಗೆ ಸನ್ಮಾನ ಮಾಡಲಾಯಿತು.









1. ಡಾ. ಟಿ. ಎಸ್. ಸತ್ಯವತಿ
2. ಶ್ರೀ ಟಿ. ಎಸ್. ನಾಗಾಭರಣ
3. ಶ್ರೀ ಶ್ರೀನಿವಾಸ ಪ್ರಭು
4. ಡಾ. ಬಿ. ವಿ. ರಾಜಾರಾಂ
5. ಶ್ರೀ ಕೆ. ವಿ. ನಾಗರಾಜ ಮೂರ್ತಿ





ಮೈಸೂರು ಅಸೋಸಿಯೇಷನ್ನಿನ ರಂಗ ಚಟುವಟಿಕೆ ಹಾಗೂ ಸಾಹಿತ್ಯ ರಚನೆಯಲ್ಲಿ ತೊಡಗಿದ ಹಾಗೂ ತೊಡಗಿರುವ 5 ಮಂದಿಗೆ ಸನ್ಮಾನ ಮಾಡಲಾಯಿತು.

1. ಶ್ರೀಮತಿ ಗೀತಾ ವಿಶ್ವನಾಥ ಪರವಾಗಿ ಶ್ರೀಮತಿ ಶಾರ್ವರಿ ಜೈರಾಮ್





2. ಶ್ರೀಮತಿ ಉಮಾ ಪ್ರಭಾಕರ್ ರಾವ್
3. ಶ್ರೀಮತಿ ಗಿರಿಜಾ ಶಾಸ್ತ್ರಿ
4. ಶ್ರೀ ಪುಟ್ಟಣ್ಣಯ್ಯ ಪರವಾಗಿ ಶ್ರೀ ರಾಜೇಂದ್ರ ಪುಟ್ಟಣ್ಣಯ್ಯ
5. ಶ್ರೀ ದುಗ್ಗಪ್ಪಯ್ಯ ನಾಡಿಗ್ ಹಾಗೂ ಶ್ರೀಮತಿ ಕುಂತಿ ದುಗ್ಗಪ್ಪಯ್ಯ ಪರವಾಗಿ ಶ್ರೀ ರಾಜು ನಾಡಿಗ್





ಆಮೇಲೆ ಡಾ. ಮನು ಬಳಿಗಾರ್ ಅವರು ಮಾತನಾಡುತ್ತಾ ಕನ್ನಡ ಸಂಸ್ಕೃತಿಯ ಪರವಾಗಿ ಮೈಸೂರು ಅಸೋಸಿಯೇಷನ್ ನೂರು ವರ್ಷ ದುಡಿಯುತ್ತಿದೆ. ನಾನೇ ಹೊರನಾಡ ಕನ್ನಡ ಸಂಘಗಳ ಸಮ್ಮೇಳನವನ್ನು ಮುಂಬಯಿಯಲ್ಲಿ ಜರುಗಿಸಿದಾಗ ಮೈಸೂರು ಅಸೋಸಿಯೇಷನ್ 70 ಹೊರನಾಡ ಸಂಸ್ಥೆಗಳನ್ನು





ಕೂಡಿಸಿದ್ದು, ಮಹತ್ತರವಾದ ಕೆಲಸ. ಅಂತೆಯೇ ಎಲ್ಲಾ ಕನ್ನಡ ಕಾರ್ಯಗಳಲ್ಲಿ ತನ್ನನ್ನು ತಾನೇ ತೊಡಗಿಸಿಕೊಂಡಿದ್ದು ಯಾವ ಪ್ರಶಸ್ತಿಗಾಗಿಯೂ ಅಲ್ಲ. ಅಂತೆಯೇ ಕರ್ನಾಟಕ ಸರ್ಕಾರ ಯಾವ ಅನುದಾನವನ್ನೂ ಕೊಡದಿರುವುದು ಸಂತಾಪ ಸೂಚಕ ಎಂದರು.





ಶ್ರೀಮತಿ ಕಮಲಾ ಅವರು ಮಾತನಾಡಿ, ಮೈಸೂರು ಅಸೋಸಿಯೇಷನ್ ಕೆಲಸ ಮಾಡುತ್ತಿರುವುದು ಯಾವ ಪ್ರಶಸ್ತಿಯ ಆಸೆಗಾಗಿಯೂ ಅಲ್ಲ. ಕನ್ನಡದ ಕೈಂಕರ್ಯ ಮಾಡುವುದೇ ಒಂದು ಸಂತಸದ ಕೆಲಸ. ಅದಕ್ಕಾಗಿ ನಾವೆಲ್ಲರೂ ದುಡಿಯುತ್ತಿದ್ದೇವೆ. ನೀವೆಲ್ಲ ಮಹನೀಯರು ಬಂದು ನಮ್ಮ ಶತಮಾನೋತ್ಸವದಲ್ಲಿ ಭಾಗಿಯಾಗಿರುವುದರಿಂದ ನಮ್ಮಲ್ಲಿ ಮತ್ತಷ್ಟು ಹುಮ್ಮಸ್ಸನ್ನು ತಂದಿದೆ ಎಂದರು.

ಆಮೇಲೆ ಸಹ ಕಾರ್ಯದರ್ಶಿ ಶ್ರೀ ನಾರಾಯಣ ನವಿಲೇಕರ್ ಅವರು ಎಲ್ಲರಿಗೂ ಧನ್ಯವಾದಗಳನ್ನು ಹೇಳಿದರು. ಮೊದಲಾಗಿ ಭಾರತೀಯ ವಿದ್ಯಾಭವನದ ಕಾರ್ಯದರ್ಶಿ ಶ್ರೀ ಎಚ್. ಎನ್. ಸುರೇಶ್ ಅವರಿಗೆ ಮತ್ತೆ ಕಾರ್ಯನಿರ್ವಹಣೆಗಾರರಾದ ಶ್ರೀಮತಿ ನಾಗಲಕ್ಷ್ಮೀರಾವ್ ಅವರಿಗೆ ಧನ್ಯವಾದಗಳನ್ನು ಸಮರ್ಪಿಸಿದರು. ಈ ಶತಮಾನೋತ್ಸವದ ಹಬ್ಬವನ್ನು ಮುಂದೆ ಬಂದು ಹೊಣೆಗಾರಿಕೆಯನ್ನು ಹೊತ್ತ ತಂಡವನ್ನು ಸನ್ಮಾನಿಸಿದರು.

- ಶ್ರೀ ರವಿಶಂಕರ್
- ಶ್ರೀ ಸುಧೀಂದ್ರ
- ಶ್ರೀ ಅಮೃತ ದೇಸಾಯಿ
- ಶ್ರೀಮತಿ ರಮಾ ವೆಂಕಟೇಶ್
- ಶ್ರೀಮತಿ ಶಾರ್ವರಿ
- ಶ್ರೀಮತಿ ಸುಧಾ ರವಿಶಂಕರ್
- ಶ್ರೀ ರಂಗನಾಥ್ ರಾವ್
- ಶ್ರೀ ರಂಗಪ್ರಸಾದ್
- ಶ್ರೀ ಜನಾರ್ಧನ್
- ಶ್ರೀ ಶ್ರೀನಿವಾಸ್ ಕೆ. ಎನ್
- ಶ್ರೀಮತಿ ಸುಧಾ ಶ್ರೀನಿವಾಸ್
- ಶ್ರೀಮತಿ ಮಮತಾ ಪ್ರಭು
- ಶ್ರೀ. ಶೇಷಾದ್ರಿ ಚಡಗ
- ಶ್ರೀ ವೈ. ವಿ. ಗುಂಡೂರಾವ್
- ಶ್ರೀ ಗುರುದತ್ತ್ ರಾವ್
- ಶ್ರೀಮತಿ ಪ್ರತಿಮಾ ರಾವ್
- ಶ್ರೀಮತಿ ಮಂಗಳಾ
- ಶ್ರೀ ರವಿ
- ಶ್ರೀ ರಮೇಶ್
- ಶ್ರೀ ನಾಗೇಶ್
- ಶ್ರೀಮತಿ ವಿಜಯಾ ಬೆಳವಾಡಿ

ವಂದನಾರ್ಪಣೆ ಮುಗಿದ ಮೇಲೆ ಶ್ರೀಮತಿ ರಮಾ ವೆಂಕಟೇಶ್ ಅವರ ನೇತೃತ್ವದಲ್ಲಿ ಮೈಸೂರು ಅಸೋಸಿಯೇಷನ್ನಿನ ನಾಟಕಗಳ ರಂಗ ಗೀತೆಗಳನ್ನು ಹಾಡಲಾಯಿತು. ವಿಡಿಯೋ ಮತ್ತು ಮಕ್ಕಳ ನೃತ್ಯದಿಂದ ಕೂಡಿದ ಈ ರಂಗಗೀತೆಯ ರೂಪಕ ಎಲ್ಲರ ಮನ ಸೆಳೆಯಿತು. ಅಂತೆಯೇ ಅಸೋಸಿಯೇಷನ್ನಿನ ಸವಿನೆನಪುಗಳನ್ನು ಎಲ್ಲರ ಎದೆಯಲ್ಲಿ ಮಿಡಿಯಿತು.







ಈ ಮೊದಲ ಹಂತ ಮುಗಿದ ಮೇಲೆ ನಮ್ಮ ಶ್ರೀನಿವಾಸ್ ಹಾಗೂ ಸುಧಾ ಅವರು ನೀಡಿದ ಸವಿ ಊಟವನ್ನು ಎಲ್ಲರೂ ಸವಿದು ಹಿಗ್ಗಿದರು. ಆ ನೂಕುನುಗ್ಗಲಲ್ಲಿ ಊಟ ಮುಖ್ಯವಾಗಿರಲಿಲ್ಲ, ಎಲ್ಲರೂ ತಮ್ಮೊಡನೆಯ ಗೆಳೆಯರಲ್ಲಿ ಮಾತನಾಡುತ್ತಾ ಹಿಂದಿನ ನೆನಪುಗಳನ್ನು ಸವಿದರು.




ಸವಿಯೂಟದ ನಂತರ ಶ್ರೀಮತಿ ಸುಧಾ ಶ್ರೀನಿವಾಸ್ ಅವರಲ್ಲಿ ತರಬೇತಿಯನ್ನು ಪಡೆದ ಹತ್ತು ಮಂದಿ ಭರತನಾಟ್ಯವನ್ನು ಪ್ರದರ್ಶಿಸಿದರು. ಅವರ ಹೆಜ್ಜೆ, ತಾಳ, ಭಾವಭಂಗಿ, ಅಭಿನಯಗಳನ್ನು ಕಂಡು ನೋಡುಗರ ಮನ ಇನ್ನೂ ಹಿಗ್ಗಿತು. ಈ ಎಳೆಯರೇ ನಮ್ಮ ಮುಂದಿನ ಪೀಳಿಗೆಯಾಗಿ ನಮ್ಮ ಸಂಸ್ಕೃತಿಯನ್ನು ಉಳಿಸುವ ಬೆಳೆಸುವ ಜನತೆಯಾಗಿರುವಾಗ, ಅವರನ್ನು ಈ ಬಗೆಯಾಗಿ ಅಣಿ ಮಾಡಿರುವ ಅವರ ಗುರು ಶ್ರೀಮತಿ ಸುಧಾ ಶ್ರೀನಿವಾಸ್ ಅವರಿಗೆ ನಮ್ಮ ವಂದನೆಗಳು.








ಹಾಸ್ಯ ತರಂಗವನ್ನು ಹರಿಸುವ ನಮ್ಮ ವೈ.ವಿ. ಗುಂಡೂರಾವ್ ಅವರು ನೋಡುಗರ ಮನವನ್ನು ಸೆಳೆದು ತಮ್ಮ ಮಾತಿನಿಂದ ಎಲ್ಲರನ್ನೂ ನಕ್ಕು ನಲಿಸಿದರು. ಅವರು ಹೇಳಿದ ಕೆಲವು ಕತೆಗಳನ್ನು ಕೇಳಿದಾಗ ಹೀಗೂ ಉಂಟೇ? ಎಂದು ನಗು ಹರಿಯಿತು.

ನಂತರ ನಮ್ಮ ಅಭಿನಯ ಚತುರ ವಿ. ರಂಗನಾಥ್ ಕೈಲಾಸಂ ನಾಟಕಗಳ ತುಣುಕುಗಳನ್ನು ಅಭಿನಯಿಸಿದಾಗ ಹಳೆಯ ಅಸೋಸಿಯೇಷನ್ ನೆನಪುಗಳು ಮರುಕಳಿಸಿ, ಮನವನ್ನು ನಲಿಸಿತು. ಮೈಸೂರು ಅಸೋಸಿಯೇಷನ್






1946ರಿಂದ 1970ರ ವರೆಗೆ ಆಡುತ್ತಿದ್ದ ಎಲ್ಲಾ ಕೈಲಾಸಂ, ಪರ್ವತವಾಣಿ, ಕ್ಷೀರಸಾಗರ ನಾಟಕಗಳ ನೆನಪು ಎಲ್ಲರಿಗೂ ಮರುಕಳಿಸಿತು.

ನಂತರ ರವಿ ಶಂಕರ್ ಮತ್ತು ಗೆಳೆಯರು ನೀಡಿದ ಸಿಹಿತಿಂಡಿ, ತಿನಿಸು, ಕಾಫಿಯನ್ನು ಮೆದ್ದು, ನೋಡುಗರು ವಿದುಷಿ ಮಾನಸಿ ಪ್ರಸಾದ್ ಅವರ ಗಾಯನವನ್ನು ಕೇಳಲು ಸಿದ್ಧರಾದರು. ಶ್ರೀ ಚಾಮುಂಡೇಶ್ವರಿಯ ಗಾನದಿಂದ ಮೊದಲು ಮಾಡಿ ಅನೇಕ ದಾಸರ ಪದಗಳನ್ನು ಹಾಡಿ, ಆಮೇಲೆ ಮರಾಠಿ ಸಂತರ ಅಭಂಗಗಳನ್ನು ಹಿಂದಿಯ ಭಜನ್ ಗಳನ್ನು ಹಾಡಿ, 'ಭಾಗ್ಯದ ಲಕ್ಷ್ಮೀ ಬಾರಮ್ಮಾ' ಎಂದು ಕೊನೆ ಮಾಡಿದ ಮಾನಸಿ ಪ್ರಸಾದ್ ಎಲ್ಲರ ಮನ ಸೂರೆಗೊಂಡರು.

ಈ ಪರಿಯ ಸೊಬಗು ಬೆಂಗಳೂರಿನಲ್ಲಲ್ಲದೆ ಇನ್ನೆಲ್ಲಿ ಸಿಕ್ಕೀತು!!!

ಮರುದಿನ ಶತಮಾನೋತ್ಸವದಲ್ಲಿ ಭಾಗವಹಿಸಲಾಗದ ನಮ್ಮ ಹಿರಿಯರು ಕೆಲವರು ನಮ್ಮ ನೆನಪಿನಲ್ಲಿ ಅಚ್ಚಳಿಯದೆ ಇದ್ದಾರೆ. ಅವರೆಲ್ಲರ ಮನೆಗೆ ನಾವೇ





ಹೋಗಿ ಅವರಿಗೆ ಸನ್ಮಾನವನ್ನು ನೀಡಿದ್ದು ನಮ್ಮ ಮನಸಿಗೆ ಆನಂದ ನೆಮ್ಮದಿ ದೊರಕಿತು. ಮೊದಲಿಗೆ ಶ್ರೀಮತಿ ಲಕ್ಷ್ಮೀ ದಾಸಪ್ಪನವರು. 100ರ ಹತ್ತಿರವಿದ್ದರೂ ನಮ್ಮೆಲ್ಲರನ್ನೂ ಗುರುತಿಸಿ ಹರಸಿದರು. ಅವರ ಮಗ ನಾಗೇಶ್ ಸೊಸೆ ವಿಜಯಾ ಮತ್ತು ಮೊಮ್ಮಗಳು ಅವರನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ





ಎಂಬುದನ್ನು ನೋಡಿ ಬೇರೆಯವರು ಕಲಿಯಬೇಕು.





ಎರಡನೆಯದಾಗಿ ಶ್ರೀಮತಿ ಮಧುರಾ ಕೃಷ್ಣಸ್ವಾಮಿ. 1952ರಲ್ಲಿ ಅಸೋಸಿಯೇಷನ್ ನಾಟಕದಲ್ಲಿ ಮಹಿಳಾ ಕಲಾವಿದೆ ಇವರೇ. ಅದುವರೆಗೆ ಗಂಡಸರೇ ಹೆಣ್ಣು ಪಾತ್ರವನ್ನು ಮಾಡುತ್ತಿದ್ದರು. 97 ವಯಸ್ಸಿನಲ್ಲಿಯೂ ಚೆನ್ನಾಗಿ ಮಾತನಾಡಿ ನಮ್ಮನ್ನು ಹರಸಿದರು.

ಮೂರನೆಯದಾಗಿ ಶ್ರೀ ಜೈರಾಮ್. ಅವರು ನಮ್ಮ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಲ್ಲದೆ ರಿಹರ್ಸಲ್ ಆದ ಮೇಲೆ ನಮ್ಮೆಲ್ಲರನ್ನು ಮನೆಗೆ ಬಿಟ್ಟು ಬರುತ್ತಿದ್ದದ್ದನ್ನು ಯಾರೂ ಮರೆಯಲಾಗದು. ನಾವು ಅಂದು ಉಷಾ ಜೈರಾಮ್ ನೆನೆದು ನೆನೆದು ಕಣ್ಣೊರಿಸಿಕೊಂಡೆವು. ಸರಿತಾ ಜೈರಾಮ್ ತನ್ನ ತಂದೆಯನ್ನು ನೋಡಿಕೊಳ್ಳುವುದನ್ನು ಎಲ್ಲಾ ಕಿರಿಯರು ನೋಡಲೇ ಬೇಕು. ಅದು ಎಲ್ಲರಿಗೂ ಮಾದರಿ.

ನಾಲ್ಕನೆಯದಾಗಿ ಶ್ರೀ ಪ್ರಕಾಶ್ ಬೆಳವಾಡಿಯವರು. ಆರೋಗ್ಯ ಸರಿಯಾಗಿಲ್ಲದಿದ್ದರೂ ಚೆನ್ನಾಗಿ ಮಾತನಾಡಿ ನಮ್ಮನ್ನು ನಲಿಸಿದರು.

ಭಾರತೀಯ ವಿದ್ಯಾಭವನದವರು ಮೈಸೂರು ಅಸೋಸಿಯೇಷನ್‌ಗೆ ತಮ್ಮ ಸಭಾಂಗಣವನ್ನು ಮತ್ತು ಸಿಬ್ಬಂದಿಗಳನ್ನೂ ಉಚಿತವಾಗಿ ಇತ್ತು ನಮ್ಮ ಶತಮಾನೋತ್ಸವವನ್ನು ಕಂಗೊಳಿಸುವಂತೆ ಮಾಡಿದ್ದನ್ನು ನಾವು ನೆನೆಯಲೇ ಬೇಕು.

ಎರಡನೆಯ ದಿನ ನಾವು ಅವರ ಕಾರ್ಯದರ್ಶಿ ಶ್ರೀ ಎಚ್. ಎನ್. ಸುರೇಶ್ ಅವರಿಗೆ ಸನ್ಮಾನ ಮಾಡಿದೆವು. ಅವರೊಡನೆ ಮಾತೇ ಚೆಂದ. ಶ್ರೀಮತಿ ನಾಗಲಕ್ಷ್ಮೀ ರಾವ್, ಮೆನೇಜರ್ ಅವರು ನಮಗೆ ಒದಗಿದ ಭಾಗ್ಯದ ಲಕ್ಷ್ಮಿ. ಅವರು ನಮ್ಮ ಮೇಲೆ ಅಷ್ಟು ಅಕ್ಕರೆ ಇಟ್ಟು ಎಲ್ಲಾ ಕಾರ್ಯಕ್ರಮಗಳ ಮೇಲೆ ಕಣ್ಣಿಟ್ಟು ಅವೆಲ್ಲಾ ಕೈಗೂಡಿದಂತೆ ಮಾಡಿದವರು. ಅವರಿಗೂ ನಾವು ಸನ್ಮಾನ ಮಾಡಿದೆವು.



# ಸಿಂಧು ತಾಯಿ ಸಪ್ಕಾಲ್



✍ ಡಾ. ಸುಮಾ ದ್ವಾರಕಾನಾಥ್

(ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಮೈಸೂರು ಜಿಲ್ಲೆಯಲ್ಲಿ ಮಾಡಿದ ಭಾಷಣ)

ಕನ್ನಡ ಬಂಧುಗಳಿಗೆ ನಮಸ್ಕಾರ ಹಾಗು ದಸರಾ ಹಬ್ಬದ ಶುಭಾಶಯಗಳು. ಶಕ್ತಿಯ ನವ ವಿಧ ರೂಪಗಳ ಸಾಕ್ಷಾತ್ಕಾರವೇ ನವರಾತ್ರಿ.

ದೇವಿಯ ಮೂರ್ತ ಕಲ್ಪನೆಯೇ ಅದ್ಭುತ.ತಾಯಿಯ ಕಣ್ಣಿನಲ್ಲಿ ಮಮತೆ ಉಕ್ಕಿದರೆ , ಕತ್ತಿನಲ್ಲಿ ರುಂಡಮಾಲೆ ಧರಿಸಿ , ಕೈಯ್ಯಲ್ಲಿ ಖಡ್ಗ ಹಿಡಿದು, ಕಾಲಿನ ಕೆಳಗೆ ದುಷ್ಟ ಸಂಹಾರ ಮಾಡುತ್ತಿರುವ ದೇವಿಯ ಚಿತ್ರ ನೋಡಿದಾಗ ಯಾರಿಗಾದರೂ ಕೌತುಕವೆನಿಸದಿರದು. ಶಕ್ತಿರೂಪಿಣಿಯಾಗಿ ಸೃಷ್ಟಿ (ಸೃಜನತೆ) ಮತ್ತು ಲಯ



(ವಿನಾಶ)ವೆರಡನ್ನೂ ಸಂಭಾಳಿಸುತ್ತಿರುವ ದೇವಿಯ ಮಹಾತ್ಮೆ ಅಗಾಧ.

ಇಂಥ ದೇವಿಯ ನಾಡಿನಲ್ಲಿ ಬಾಳಿ ಬದುಕಿದ ನಾರೀಶಕ್ತಿಗಳನ್ನು ಇತಿಹಾಸದಲ್ಲಿ ಓದಿದ್ದೇವೆ. ಆದರೆ ಜ್ವಲಂತ ಉದಾಹರಣೆಯಾಗಿ, ಇಂದಿಗೂ ನಮ್ಮೊಂದಿಗಿರುವ ನಾರಿಯರನ್ನು ಗುರುತಿಸುವ ಕಾರ್ಯ ನೀವು ಮಾಡುತ್ತಿದ್ದೀರಿ, ಈ ಮಹತ್ಕಾರ್ಯಕ್ಕೆ ಮೊದಲು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ.

ಕನ್ನಡನಾಡಿಂದ ಮುಂಬಯಿಗೆ ಬಂದಮೇಲೆ ಇಲ್ಲಿಯ ವಾತಾವರಣಕ್ಕೆ ಎದುರಾದಾಗ ಇಲ್ಲಿನ ಕೆಚ್ಚು ಮತ್ತು ಗುರಿ ಸಾಧಿಸುವ ಗುಣ ನನ್ನನ್ನು ಮರು ರೂಪಿಸಿತು. ಗೆಳತಿ ರೂಪ ನಾಗರಾಜ್ ನನ್ನನ್ನು ಸಂಪರ್ಕಿಸಿದಾಗ ಮಹಾರಾಷ್ಟ್ರದ ನಾರಿಯರ ಬಗ್ಗೆ ಹೇಳಬೇಕೆಂದೆನಿಸಿ,




ಮಹಾರಾಷ್ಟ್ರದ ಮದರ್ ತೆರೇಸಾ ಎಂದು ಕರೆಸಿಕೊಳ್ಳುವ ಒಬ್ಬ ತಾಯಿಯ ಕಥೆಯನ್ನು ಹೇಳಬಯಸುತ್ತೇನೆ.

14ನೇ ನವೆಂಬರ್ 1948 ಇಸವಿ, ಮಹಾರಾಷ್ಟ್ರದ ವರ್ಧಾ, ಪಿಂಪ್ರಿ ಮೋಘೆಯೆನ್ನುವ ಒಂದು ಸಣ್ಣ ಹಳ್ಳಿಯಲ್ಲಿ ಈ ಮಹಾಮಾತೆಯ ಜನನವಾಯ್ತು. ಕುಟುಂಬಕ್ಕೆ ಬೇಡದ ಮಗುವಾಗಿ ಜನಿಸಿದ ಇವಳನ್ನು ಚಿಂದಿಯೆಂದು ಕರೆದರು. ಗೌಳಿಗರ ಮನೆಯಲ್ಲಿ ಹುಟ್ಟಿದ ಇವಳು ಎಮ್ಮೆ ಹಸುಗಳನ್ನು ಬೆಳಗ್ಗೆ ಕೆರೆಯಲ್ಲಿ ಈ ಜಾಡಲು ಬಿಟ್ಟು ತಾನು ಶಾಲೆಗೆ ತಡವಾಗಿ ಹೋಗಿ ದಿನಾಲೂ ಮೇಷ್ಟ್ರ ಕೈಲಿ ಬೈಗುಳ ತಿನ್ನುತ್ತಿದ್ದಳು.ಮತ್ತೆ ಶಾಲೆ ಮುಗಿದ ಕೂಡಲೇ ದನಕರುಗಳನ್ನು ಅಟ್ಟಿಕೊಂಡು ಮನೆಗೆ ಹೋದರೆ ಅವರಮ್ಮನ ಕೈಲಿ ಬೈಗುಳ ತಿನ್ನಬೇಕಾಗಿತ್ತು. ಅವರಪ್ಪ ಅಭಿಮನ್ಯು ಸಾಠೆ ಇವಳನ್ನು ತುಂಬಾ ಪ್ರೀತಿಸುತ್ತಿರುತ್ತಾನೆ. ಅವನ ಪ್ರೋತ್ಸಾಹವೇ ಅವಳಿಗೆ ಜೀವನ ಸಹನವಾಗುವಂತೆ ಮಾಡುತ್ತಿರುತ್ತದೆ. ಅವರಮ್ಮ ಇವಳಿಗೆ 12 ವರ್ಷವಾಗಿದ್ದಾಗಲೇ 25 ವರ್ಷದ ಗಂಡಿನೊಂದಿಗೆ ಮದುವೆ ಮಾಡುತ್ತಾಳೆ.

ಗಂಡನ ಮನೆಯವರು ಅಶಿಕ್ಷಿತರಾಗಿದ್ದು, ಇವಳು 4ನೇ ತರಗತಿಯವರೆಗೆ ಓದಿದ್ದರಿಂದ ಅವರು ಇವಳನ್ನು ಕಾಲಿನ ಚಪ್ಪಲಿಯಂತೆ ದುಡಿಸಿಕೊಳ್ಳುತ್ತಾರೆ. ರಾತ್ರಿ ಗಂಡ ಶ್ರೀಹರಿ ಸಪ್ಕಾಲ್ ಮನೆಗೆ ಬಂದ ಮೇಲೆ ಅವನಿಗೆ ಹೆಂಡತಿಯನ್ನು ಹೊಡೆಯುವುದೊಂದೇ ಕೆಲಸ. ಹಾಗೇ ಮೂರು ಮಕ್ಕಳೂ ಆದವೆಂದು ಹೇಳುತ್ತಾಳೆ. ಇವಳಿಗೆ ಓದುವುದು ಎಷ್ಟು ಇಷ್ಟವೆಂದರೆ ದಿನಸಿ ಸಾಮಾನಿನ ಕಾಗದದಲ್ಲಿ

ಬಂದ ವಿಷಯವನ್ನು ಆ ಕತ್ತಲೆ ಮನೆಯಲ್ಲೇ ಮುಚ್ಚಿ ಓದುತ್ತಿದ್ದಳಂತೆ. ಗಂಡ ಕಂಡರೆ ಮತ್ತೆ ಹೊಡೆತ, ಅದಕ್ಕೊಂದು ಪರ್ಯಾಯ ಕಂಡುಹಿಡಿದು ಇಲಿಬಿಲದಲ್ಲಿ ಕಾಗದ ತುರುಕುತ್ತಿದ್ದಳಂತೆ. ಒಂದು ಸಲ ಮುಂಗುಸಿಯ ಬಿಲದಲ್ಲಿ ತುರುಕಿ, ಕೈ ಕಚ್ಚಿಸಿ ಕೊಳ್ತಾಳೆ ಕೊನೆ ಕೊನೆಗೆ ಗಂಡನನ್ನು ಕಂಡ ತಕ್ಷಣ ಹೆದರಿಕೆಯಿಂದ ಕಾಗದದ ಚೂರನ್ನು ನುಂಗಿ ಬಿಡುತ್ತಿದ್ದಳಂತೆ. ಅದಕ್ಕೇ ಈಗ ಕವಿತೆಗಳು ಹೊಟ್ಟೆಯಿಂದ ಹೊರಗೆ ಬರುತ್ತಿದೆ ಅಂತ ನಗ್ತಾ ಹೇಳ್ತಾಳೆ.

ಗೌಳಿ ಸಮಾಜವಾದ್ದರಿಂದ, ಊರ ದನಗಳನ್ನು ಕಾಡಿನಲ್ಲಿ ಮೇಯಿಸುತ್ತಿರುತ್ತಾರೆ. ದನಕರುಗಳ ಸೆಗಣಿಯನ್ನೂ ಇವರಿಗೆ ಬಿಡದೆ, ಸರಕಾರದವರು ಅದನ್ನು ಲಾರಿಯಲ್ಲಿ ತೆಗೆದುಕೊಂಡು ಹೋಗಿ ಊರಲ್ಲಿ ಹರಾಜು ಹಾಕಿ ದುಡ್ಡು ತೆಗೆದುಕೊಳ್ತಿದ್ದರಂತೆ. ಗೌಳಿಯರ ನಷ್ಟ ತಡೆಯಲು ಇವಳು ಅರಣ್ಯಾಧಿಕಾರಿಗಳ ಜೀಪನ್ನು ಅಡ್ಡ ಹಾಕಿ ಜನಗಳಿಗೆ ನ್ಯಾಯ ದೊರಕಿಸಿ ಕೊಟ್ಟಿದ್ದಾಳೆ. ಆ ಕೋಪಕ್ಕೆ ಊರ ಮುಖ್ಯಸ್ಥ ನಿನ್ನ ಹೆಂಡತಿ ನನ್ನಿಂದ ಗರ್ಭಿಣಿಯಾಗಿದ್ದಾಳೆ ಎಂದು ಇವಳ ಗಂಡನಿಗೆ ಚಾಡಿ ಹೇಳುತ್ತಾನೆ. ಅದನ್ನು ನಂಬಿದ ಗಂಡ ಬಂದು 9 ತಿಂಗಳ ಬಸಿರಿಯನ್ನು ಕಾಲಿಂದ ಹೊಟ್ಟೆಗೆ ಒದ್ದು ಮನೆಯಿಂದ ಹೊರಹಾಕುತ್ತಾನೆ. ಇಲ್ಲಿಂದ ಅವಳ ಹೋರಾಟ ಶುರುವಾಗುತ್ತದೆ.

ದನದ ಕೊಟ್ಟಿಗೆಯಲ್ಲೇ ರಾತ್ರಿ ಪ್ರಜ್ಞೆ ತಪ್ಪಿ ಬಿದ್ದಿರುತ್ತಾಳೆ. ಅಲ್ಲೇಒಂದು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ಹತ್ತಿರದಲ್ಲಿ ಕಂಡ ಒಂದು ದೊಡ್ಡ ಕಲ್ಲಿನಿಂದ ಕರುಳ ಬಳ್ಳಿಯನ್ನು ಕತ್ತರಿಸಿ ಕೊಳ್ಳುತ್ತಾಳೆ. ಕೊಟ್ಟಿಗೆಯಲ್ಲಿದ್ದ ಒಂದು ದನ ಬಂದು ಇವಳನ್ನು ಎಬ್ಬಿಸಲು ಒಂದೇ ಸಮನೆ ಕೂಗುತ್ತಾ ಬೇರೆ ಯಾವ ದನಗಳೂ ಹತ್ತಿರ ಬರದಂತೆ ಬೆಳಗಿನ ತನಕ ಅರಚುತ್ತಿರುತ್ತದೆ. ಅದು ಅವಳ ಮನಸ್ಸಿಗೆ ತಟ್ಟುತ್ತದೆ. ಮೂಕಪ್ರಾಣಿಗಳ ದಯೆ ಅವಳನ್ನು ಕರಗಿಸುತ್ತದೆ. ಬೆಳಗ್ಗೆ ನಿಧಾನವಾಗಿ ಎದ್ದು ಕೆರೆಯ ಬಳಿ ಹೋಗಿ ಮಗುವನ್ನು ತೊಳೆದು ತಾನೂ ಸ್ನಾನ ಮಾಡಿ ನೀರು ಕುಡಿದು, ನಿಧಾನವಾಗಿ ತೌರು ಮನೆಯೆಡೆಗೆ ನಡೆಯುತ್ತಾಳೆ. ಅಲ್ಲಿ ಸ್ವಂತ ತಾಯಿಯೇ ಅವಳನ್ನು ಒಳಗೆ ಬರಲು ಬಿಡದೆ ಹಿಂದಿನ ದಿನದ ಹಳಸಿದ ಜೋಳದ ನುಚ್ಚಿನ ಕಲೆಸಿದ ಹಿಟ್ಟು ಕೈಗೆ ಹಾಕಿ ಸಾಗಹಾಕುತ್ತಾಳೆ. ಕಡು ಬಡತನದಿಂದ ಸಮಾಜಕ್ಕೆ ಅವಳು ಹೆದರಿ ಗಂಡನೇ ಬಿಟ್ಟ ಮೇಲೆ ಕೆರೆಗೋ ಭಾವಿಗೋ ಬೀಳು ಎಂದು ನಿರ್ದಾಕ್ಷಿಣ್ಯವಾಗಿ ಹೇಳಿ ಕಳಿಸುತ್ತಾಳೆ. ಮುಂದಿನ ದಾರಿ ಕಾಣದೆ ಸಾಯಬೇಕೆಂದು ರೈಲ್ವೆ ಕಂಬಿಯ ಮೇಲೆ ಬಂದು ಕೂಡುತ್ತಾಳೆ. ಒಳಗಿನ ಅಂತರಾತ್ಮ ನೀನು ಮಾಡುತ್ತಿರುವುದು ತಪ್ಪು ಎಂದು ಹೇಳಿದಂತೆ ಭಾಸವಾಗಿ ಮಗುವನ್ನು ಎದೆಗೊತ್ತಿಕೊಂಡು ರೈಲ್ವೆ ಸ್ಟೇಷನ್‌ಗೆ ಬರುತ್ತಾಳೆ. ಬಹಿಣಾಬಾಯಿ ಮತ್ತು ಸುರೇಶ್ ಭಟ್‌ರವರ ಹಾಡುಗಳನ್ನು ಅಸಹಾಯಕತೆಯಿಂದ ಅಳು ಬಂದಾಗಲೆಲ್ಲಾ ಹಾಡಿಕೊಂಡು ಭಿಕ್ಷೆಬೇಡುತ್ತಾಳೆ. ಬಂದ ಭಿಕ್ಷೆಯನ್ನ ಇತರ ಭಿಕ್ಷುಕರೊಂದಿಗೆ ಹಂಚಿ ತಿನ್ನುತ್ತಾಳೆ. ಅವರಿಗೆ ಇವಳು ಊಟ ಕೊಡುವುದರಿಂದ ಇವಳಿಗೆ ರಕ್ಷಣೆಯೂ ಸಿಗುತ್ತದೆ. ಆದರೂ ಇವಳಿಗೆ ಅಳುಕು. ಅವರೆಲ್ಲಾ ಸಹಜ ಭಿಕಾರಿಯಾದ್ರಿಂದ ಬೇಗ ನಿದ್ದೆ ಮಾಡ್ತಿದ್ರು. ನಾನೋ ಡೂಪ್ಲಿಕೇಟ್ ಭಿಕಾರಿ ಆದ್ರಿಂದ ನಿದ್ದೆ ಬರ್ತಿಲಿಲ್ಲ ಅಂತಾಳೆ. 20 ವರ್ಷದ ಹೆಂಗಸಾದ್ದರಿಂದ ಪರ್ಯಾಯ ಹುಡುಕಿಕೊಂಡೆ ಎನ್ನುತ್ತಾಳೆ. ಹತ್ತಿರದಲ್ಲೇ ಇದ್ದ ಸ್ಮಶಾನಕ್ಕೆ ಹೋಗಿ ನಾನು ಸಾಯಬೇಕೂ ಅಂತ ಜೋರಾಗಿ ಅಳುತ್ತಾಳೆ. ಸುತ್ತಮುತ್ತ ಮನೆಯವರು ಭೂತವೆಂದು ಮನೆ ಬಾಗಿಲುಗಳನ್ನು ಮುಚ್ಚಿ ಹೊರಗೇ ಬರುವುದಿಲ್ಲ. ಹೊಟ್ಟೆ ವಿಪರೀತ ಹಸಿದಿರುತ್ತದೆ. ಅಷ್ಟರಲ್ಲಿ ಒಂದು ಹೆಣ ಸುಡಲು ಜನ ಬರುತ್ತಾರೆ. ಅವರ ಕಾರ್ಯವೆಲ್ಲಾ ಮುಗಿಯುವ ತನಕ ಮರದ ಹಿಂದೆ ನಿಂತಿರುತ್ತಾಳೆ. ಅವರು ಅತ್ತು ಕರೆದು ಹೋದಮೇಲೆ ಹೆಣದ ಪಕ್ಕದಲ್ಲಿಟ್ಟಿದ್ದ ಹಿಟ್ಟು ಕಾಣಿಸುತ್ತದೆ. ಮೆಲ್ಲನೆ ಹತ್ತಿರ ಹೋಗಿ, ಮರದ ಎಲೆ ಕಿತ್ತು ಅದರಲ್ಲಿ ಹಿಟ್ಟನ್ನು ಹಾಕುತ್ತಾಳೆ. ಅಲ್ಲೇ ಇದ್ದ ನೀರನ್ನು ಹಾಕಿ ಕಲೆಸಿ ಚಿತೆಯ ಬೆಂಕಿಯಲ್ಲೇ ಬೇಯಿಸುತ್ತಾಳೆ. 3–4 ರೊಟ್ಟಿಮಾಡಿ. ಮುರಿಮುರಿದು ತಿನ್ನುತ್ತಾಳೆ. ಮಿಕ್ಕದ್ದನ್ನು ಸೆರಗಿನಲ್ಲೇ ಕಟ್ಟಿಕೊಳ್ಳುತ್ತಾಳೆ. ಬಡತನ ಕೆಟ್ಟದ್ದಲ್ಲ ಹಸಿವು ಕೆಟ್ಟದು ಎಂದು ನಗುತ್ತಾ ಹೇಳುತ್ತಾಳೆ. ಹೀಗೆ ಎರಡನೆಯ ಬಾರಿ ಜೀವದಾನವಾಯಿತು ಎಂದು ಸ್ಮಶಾನದಿಂದ ಹೊರಬರುತ್ತಾಳೆ. ಆ ಮಧ್ಯರಾತ್ರಿಯಲ್ಲಿ ಒಬ್ಬ ಭಿಕಾರಿ ರಸ್ತೆಯಲ್ಲಿ ಅಳುವುದು ಕೇಳಿಸುತ್ತದೆ. ಅವನು "ಬಾಯಾರಿಕೆಯಿಂದ ಸಾಯ್ತಿದ್ದೀನಪ್ಪಾ ಯಾರಾದ್ರು ಸ್ವಲ್ಪ ನೀರು ಕೊಟ್ಟು ಪುಣ್ಯ ಕಟ್ಟಿಕೊಳ್ಳಿ" ಅಂತ ಅರಚುತ್ತಿರುತ್ತಾನೆ. . ಮಧ್ಯರಾತ್ರಿ ಯಾರು ಬರಬೇಕು? ನಾನೇ ಅವನಿಗೆ "ನೀರೊಂದೇ ಯಾಕೆ, ಈ ರೊಟ್ಟಿನೂ ತಿಂದು ಸಾಯಿ" ಎಂದು ಹೇಳಿ ರೊಟ್ಟಿ ಮತ್ತು ನೀರು ಕೊಡುತ್ತಾಳೆ. ಅವನು ಗೆಲುವಾದಾಗ ಅವಳ ಅಂತರಾತ್ಮ ನುಡಿದ ಹಾಗೆ ಭಾಸವಾಗುತ್ತದೆ. ಸಿಂಧುತಾಯಿ ನೀನು ಸಾಯಬೇಡ, ಸಾಯುವವರನ್ನು ಬದುಕಿಸು ಎಂದು. ಮತ್ತೆ ಶುರು ಮಾಡುತ್ತಾಳೆ, ಅವಳ ದಿನಚರಿ ಬೆಳಗ್ಗೆ ರೈಲಿನಲ್ಲಿ ಬಿಕ್ಷೆ, ರಾತ್ರಿ ಸ್ಮಶಾನದಲ್ಲಿ ಮಗಳೊಡನೆ ಆಶ್ರಯ. ಇಷ್ಟರ ನಡುವೆ . "ರೈಲಿನ ಟಿ.ಸಿ. ನನ್ನ ದೊಡ್ಡ ಶತ್ರು. ಟಿಕೆಟ್ ಅಂತ ಬರೋನು, ಇಲ್ಲ ಅಂದರೆ ಇಳೀ ಕೆಳಗೆ ಅನ್ನೋನು. ನಿಮ್ಮಪ್ಪನದಲ್ಲ ಗಾಡಿ ಅಂತಾ ಇನ್ನೊಂದಕ್ಕೆ ಹತ್ತುತ್ತಿದ್ದೆ" ಎನ್ನತ್ತಾಳೆ. ಒಂದು ಸಲ ಎಸ್.ಟಿ. ಬಸ್ ಹತ್ತಿದೆ. ಕಂಡಕ್ಟರ್ ಭಿಕಾರಿ ಅಂತ ನನಗೆ ಟಿಕೆಟ್ ಕೊಡಲಿಲ್ಲ. ನನಗೂ ಜಗಳದ ಉಮೇದು ಹತ್ತಿತ್ತು. ಜೋರಾಗಿ ಜಗಳ ಕಾದೆ , ಇಳಿಯಲಿಲ್ಲ. ಬಸ್ ಮುಂದಕ್ಕೆ ಹೋಗೋಲ್ಲ ಅಂದ. ಸುಮಾರು ಹೊತ್ತು ಹೀಗೇ ಕಳೆಯಿತು. ಅಷ್ಟರಲ್ಲಿ ಒಬ್ಬ ಭಿಕಾರಿ ಬಸ್ ಹತ್ತಿ ಬಂದು, ನಿನ್ನೆ ರಾತ್ರಿ ಮಂದಿರದಲ್ಲಿ ನೀನೇ ಹಾಡಿದೆಯಲ್ವಾ? ತುಂಬಾ ಚೆನ್ನಾಗಿ ಹಾಡಿದೆ, ಒಂದು ಲೋಟ ಚಹಾ ಕುಡಿಯಲು ಕೆಳಗೆ ಬರ್ತೀಯಾ ಅಂದ, ರಾತ್ರಿ ಘೋರಾಂಧಕಾರ, ಜೋರು ಮಳೆ, ಚಳಿ, ಬಿರುಗಾಳಿ ಬೇರೆ, ನಾನು ಚಹಾ ಕುಡಿಯಲು ಕೆಳಗಿಳಿಯುತ್ತಿದ್ದಂತೆ, ಬಸ್ ಹೊರಟೇ ಬಿಟ್ಟಿತು, ಜೋರಾಗಿ ಕೂಗಿದೆ. ಬಸ್ ನಿಲ್ಲಿಸಲಿಲ್ಲ ನೋಡು ನೋಡುತ್ತಿದ್ದ ಹಾಗೇ ಬಸ್ ಇನ್ನೂ ಗೇಟ್ ದಾಟಿರಲಿಲ್ಲ. ಕತ್ತಲಲ್ಲಿ ದೊಡ್ಡ ಸ್ಫೋಟವಾಯಿತು. ಇಡೀ ಬಸ್ಸಿಗೆ ಸಿಡಿಲು ಬಡಿದು ಉರಿಯುತ್ತಿದೆ. ನನಗೆ ಜಂಘಾಬಲವೇ ಉಡುಗಿತು. ಚಹಾ ಕೊಡಿಸಿದವನನ್ನು ಸುತ್ತಲೂ ಹುಡುಕಿದರೆ ಅವನು ಕಾಣಬೇಕಲ್ಲ. ಇದು ನನ್ನ ಮೂರನೆಯ ಆಘಾತ. ಇನ್ನು ನಿರ್ಧಾರ ಮಾಡಿದೆ, ಸಿಂಧು ತಾಯಿ ಸಾಯಲು ಪ್ರಯತ್ನಿಸುವುದಿಲ್ಲ ಎಂದು. ಹೊಸ ಜನ್ಮದೊಡನೆ ನನ್ನ ಹೆಸರು ಚಿಂದಿ ಬದಲಾಗಿ ಸಿಂಧು (ಹರಿಯುವ ಪವಿತ್ರ ನದಿ) ಎಂದು ಬದಲಾಯಿಸಿಕೊಂಡೆ ಎನ್ನುತ್ತಾಳೆ.

(ಮುಂದುವರೆಯುವುದು....)

# ನನ್ನಮ್ಮ ಎಲ್ಲರಂತಲ್ಲ



ಉಮಾ ರಾವ್

ಇವತ್ತಿನ ದಿನ ಬೇರೆಯೇ ಆಗಿತ್ತು. ಎಂದಿನಂತೆ ಇಂದೂ ಜಾಗ್ ಮಾಡಿ, ಹಣೆ ಮೇಲೆ ಮೂಡಿದ ಬೆವರು ಮಣಿಗಳನ್ನು ಟೀ ಶರ್ಟಿನ ತೋಳಿನಿಂದ ಒರೆಸಿಕೊಳ್ಳುತ್ತಾ ಕಬ್ಬನ್ ಪಾರ್ಕಿನ ಬೆಂಚಿನ ಮೇಲೆ ಕೂತ. ಆ ಗಳಿಗೆ ಅದೇ. ಪ್ರತಿ ದಿನ ಮರು ಕಳಿಸುವ, ಅತ್ಯಂತ ಆಪ್ತವಾಗುವ, ಮುದ ತುಂಬಿ ಜೀವನೋತ್ಸಾಹ ತುಳುಕಿಸುವ ಆ ಕ್ಷಣಗಳು ಶೂ ಲೇಸು ಸಡಿಲ ಮಾಡಿ ಹಾ ಎಂದು ಮೈ ಚೆಲ್ಲಿದಾಗ ಡಬಡಬನೆ ಬಡಿಯುತ್ತಿದ್ದ ಎದೆ ಬಡಿತ ಕ್ರಮೇಣ ನಿಧಾನವಾಗಿ... ಸುತ್ತ ಮುತ್ತಲಿನ ಹಕ್ಕಿಗಳ ಚಿಲಿಪಿಲಿಯಲ್ಲಿ, ಮರಗಳ ಮರ್ಮರದಲ್ಲಿ ಕಡಲೇಕಾಯೀ ಎಂಬ ಕೀಚಲು ಕೂಗಿನಲ್ಲಿ, ಪೇಪರ್ ಹುಡಗನ ಸಂಜೆವಾಣಿಯ ಕಟ್ಟಿನಿಂದ ಹೊಮ್ಮುವ ಹಸಿ ಇಂಕಿನ ಬಿಸಿ ವಾಸನೆಯಲ್ಲಿ, ಎದುರು ಮರದ ಕೆಳಗೆ ಗಾಢ ನಿದ್ರೆಯಲ್ಲಿರುವ ಮುದುಕನ ಮುಖದ ಸುಕ್ಕುಗಳಲ್ಲಿ .. ಲೀನವಾಗುತ್ತಿತ್ತು. ಕಣ್ಣೋಟ ದೂರ ದಿಗಂತದತ್ತ ಹರಿದಾಗ ಶುಭ್ರ ನೀಲಿ ಆಕಾಶದ ಮೇಲೆ ಸಂಜೆ ರಂಗಿನ ಕುಂಚ. ದ ವರ್ಲ್ಡ್ ಈಸ್ ಫರ್ಫೆಕ್ಟ್ ಪ್ರತಿ ದಿನ ಹಾಗೇ ಇಂದಿನಂತೆ

ಆದರೂ ಇವತ್ತಿನ ದಿನ ಬೇರೆಯೇ. ನೀಲಿ ಟೀ ಶರ್ಟಿನ ಜೇಬಿನಲ್ಲಿ ಮುದುರಿ ಕೂತಿತ್ತು ಆ ಬಿಳಿ ಚೀಟಿ.

"ಇವತ್ತು ನಾನು ಪಾಸಿಟಿವ್".

"ನಾನು ಮೂರು ವರ್ಷದಿಂದ ಪಾಸಿಟಿವ್" ಅಂದು ಕಾಲೇಜಿನ ಆಡಿಟೋರಿಯಂನಲ್ಲಿ ನಡೆದ ಎಚ್ಐವಿ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಆ ಮಿಂಚುಗಣ್ಣಿನ 22 ವರ್ಷದ ಕಪ್ಪು ಹುಡುಗಿ ಹೇಳಿದ್ದಳು. ಎಲ್ಲರಿಗೂ ಶಾಕ್. ಇದು ಹೇಗೆ ಸಾಧ್ಯ? ಇನ್ನೂ ಅವಳು ಹೇಗೆ ನಗುತ್ತಿದ್ದಾಳೆ? ಎಂಥ ಅನ್ಯಾಯ, ಹೀಗಾಗಬಾರದಿತ್ತು. ಆದರೆ ಅದು ಬೇರೆ ಪ್ರಪಂಚ. ನಮ್ಮವರಿಂದ ಬಹು ದೂರ ಎಂದುಕೊಂಡಿದ್ದೆವು. ದೀಸ್ ಆರ್ ಆಲ್ ಪ್ರಾಬ್ಲಮ್ಸ್ ಆಫ್ ದ ಲೋಯರ್ ಸ್ಟ್ರಾಟಾ ಯಾರ್ ಎಂದು ಶಾಲಿನಿ ಹೇಳಿದಂತೆ.

ಆದರೆ ಏನಾದರು ಮಾಡಬೇಕು ಅನ್ನಿಸಿದ್ದು ನಿಜ. ಈ ಸಮಸ್ಯೆಯ ಒಳಹೊಕ್ಕು ನೋಡಬೇಕು. ಅಧ್ಯಯನ ಮಾಡಿ, ರಿಸರ್ಚ್ ಮಾಡಿ ಹೊಸ ಔಷಧಿಗಳನ್ನು ಕಂಡು ಹಿಡಿಯಬೇಕು. ಜನಕ್ಕೆಲ್ಲಾ ಅರಿವು ಮೂಡಿಸ ಬೇಕು. ಈ ಭೂಮಿಯ ಮೇಲೆ ಮಿಂಚು ಗಣ್ಣಿನ ಕಪ್ಪು ಹುಡುಗಿಯರು ಇನ್ನೆಂದೂ ನಾನು ಪಾಸಿಟಿವ್ ಎಂದು ನುಡಿಯದಿರುವಂತೆ ಮಾಡಬೇಕು ಅನ್ನಿಸಿತ್ತು.

ಪ್ರತಿ ವರ್ಷ ಕೆಂಪು ರಿಬ್ಬನ ಧರಿಸಿ, ಕಾಲ್ನಡಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡು ಘೋಷಣೆಗಳನ್ನು ಕೂಗಿದ್ದೆವು ಅಷ್ಟೆ.

ಆದರೆ ದಿನ ಕಳೆದಂತೆ ರಾಕ್ ಮೂಸಿಕ್ ಕಾನ್ಸರ್ಟಗಳಲ್ಲಿ, ಗ್ಲೋಬಲೈಜೇಶನ್ ಚರ್ಚೆಗಳಲ್ಲಿ, ಕಾಫಿ ಡೇ ಹರಟೆಗಳಲ್ಲಿ, ಪಿವಿಆರ್ ನ ನಡುಗತ್ತಲಲ್ಲಿ ಕುಲುಕುವ ಬಿಪಾಶ ಮೈಮಾಟದಲ್ಲಿ ಆ ಕಪ್ಪು ಹುಡುಗಿ ಹಿಂದೆ ಸರಿದಿದ್ದಳು. ರಾಹುಲ್ ದ್ರಾವಿಡ್ ಟಿವಿ ಮೇಲೆ ಬಂದು ಕಾಂಡಮ್ ಬಳಸಿ ಎಂದಾಗ ಮತ್ತೆ ಒಂದು ಕ್ಷಣ ತೇಲಿ ಬರುತ್ತಿತ್ತು . ಅವಳ ಮುಖ, ಆ ನಗು.

ಥತ್, ಎಂದೋ ಯಾವನೋ ಬಾಸ್ಟರ್ಡ್ ಕಾಂಡಮ್ ಬಳಸಿದ್ದರೆ ಅವಳಿಗೆ ಹೀಗಾಗುತ್ತಿರಲಿಲ್ಲ. ತುಂಬಾ ಕೋಪ ಬರುತ್ತಿತ್ತು ಅಷ್ಟೆ.

ಎತ್ತರೆತ್ತರ ಹಸಿರು ಮರಗಳ ಕೆಳಗೆ ಸ್ವಿಸ್ ಟೆಂಟುಗಳ ಎದುರಿಗೇ ತುಂಬಿ ಹರಿಯುವ ಕಾವೇರಿ. ಅದರ ಮೇಲೆ ಬೆಳ್ಳಕ್ಕಿಗಳು. ಜಂಗಲ್ ಲಾಡ್ಜಸ್‌ನಲ್ಲಿ ಗೆಳೆಯರು ಹಾಕಿಕೊಂಡ ಮೂರು ದಿನಗಳ ಕಾರ್ಯಕ್ರಮ. ಒಂದು ಸಂಜೆ ಒಬ್ಬನೇ ಓಡುತ್ತಾ ಓಡುತ್ತಾ ಕಾವೇರಿಯಂಚಿನಲ್ಲಿ ಸಾಗಿದಾಗ ಎಷ್ಟು ದೂರ ಕಳೆಯಿತೋ ತಿಳಿಯದು. ಮುಖ ಸವರುತ್ತಿದ್ದ ತಂಗಾಳಿ. ತಲೆಕೂದಲು ನೇವರಿಸುತ್ತಾ ತೂರುವ ಮರದ ರೆಂಬೆಗಳು. ಒಂದು ಗಳಿಗೆ ನಿಂತು ಏದುಸಿರು ಬಿಡುತ್ತಾ ಕೊಂಬೆಯಿಂದ ಕೊಂಬೆಗೆ ಹಾರುತ್ತಿದ್ದ ಮಂಗಗಳನ್ನು ವಿಸ್ಮಯದಿಂದ ನೋಡುತ್ತಿದ್ದಾಗ ಕಾಡಿನ ಕಲರವದ ನಡುವೆ ಹಿಂದಿನಿಂದ ತೇಲಿ ಬಂದ ಹಲೋ. ಮರುಕ್ಷಣದಲ್ಲಿ ಪಕ್ಕದಲ್ಲೆ ನಗುತ್ತಾ ನಿಂತ ಪಕ್ಕದ ಟೆಂಟಿನ ಕೋರಿಯನ್ ಹುಡುಗಿ.. ಗಾಢವಾಗಿ ತಟ್ಟಿದ ಅವಳ ಮೈಗಂಧ. ಒದ್ದೆ ತುಟಿಗಳು. ಬೆವರಿದ್ದ ಹಣೆಗೆ ಅಂಟಿದ್ದ ನುಣುಪು ಕೂದಲು. ನೀಲಿ ಜೀನ್ಸ್, ಬಿಳಿ ಟೀ ಶರ್ಟಿನ ಮುದ್ದು ಹುಡುಗಿ. ಸಂಜೆಗತ್ತಲು ಹಾಕಿದ ಮೋಡಿ. ಆ ಸನಿಹದಲ್ಲಿ ಪುಟಿದ ಉತ್ಕಟ ಬಯಕೆಯ ಅನಿವಾರ್ಯತೆಗೆ ಇಬ್ಬರೂ ತಮ್ಮನ್ನು ಮೀರಿ ಶರಣಾದ ಆ ಕ್ಷಣ. ಮಿದುಳೆಲ್ಲಿ ಅವಿತು ಕೂತಿತ್ತೋ! ಮೈಯೆಲ್ಲಾ ಅಂಟಿದ್ದ ತರಗೆಲೆಗಳನ್ನು ಕೊಡುವುತ್ತಾ ಎದ್ದು ನಿಂತು ಇಬ್ಬರು ಬಿದ್ದು ಬಿದ್ದು ನಕ್ಕಿದ್ದರು. ಕೈ ಕೈ ಹಿಡಿದು ಮರಳಿದ್ದರು.

ಮಾರನೆಯ ದಿನವೇ ಬೇರೆಯಾದ ಹಾದಿ

ದಿನಗಳೆದಂತೆ ಅವನಲ್ಲಿ ಉಳಿದಿದ್ದು ಆ ಪರವಶತೆಯ ನೆನಪು ಮಾತ್ರ. ನಿಧಾನವಾಗಿ ಅವಳ ರೂಪ ಮಸುಕಾಗಿತ್ತು. ದೂರ ದೇಶದ ಮೂಲೆಯಲ್ಲೆಲ್ಲೋ ಕಳೆದು ಹೋಗಿದ್ದಳು. ಆಗಾಗ ಮೊಬೈಲ್ ಕಮರ್ಶಿಯಲ್‌ನ ಮೀನುಗಣ್ಣಿನ ಹುಡುಗಿಯಾಗಿ ಟಿ.ವಿ ಪರದೆಯ ಮೇಲೆ ಬಂದಾಗ ಮನ ತುಂಬುವ ಮಾರ್ದವ. ಅವಳ ಮೋಬೈಲ್ ಫೊನಲ್ಲಿ ತನ್ನ ಬಿಂಬ. ಬೆತ್ತಲೆ ಮೈತುಂಬಾ ಅಂಟಿದ್ದ ತರಗೆಲೆ.

ಶಿಟ್!

ಪಕ್ಕದಲ್ಲೇ ಮಂಚದ ಮೇಲೆ ಮಲಗಿದ್ದ ಅಮ್ಮ "ಎಷ್ಟು ಸಲ ಹೇಳಬೇಕೋ ಆ ಸ್ಲ್ಯಾಂಗ್ ಉಪಯೋಗಿಸೋದು ಬಿಟ್ಬಿಡು ಅಂತ.. ಮುಂದೆ ಡಾಕ್ಟರಾಗೋನು ನೀನು!" ಎಂದಳು.

ಇನ್ನೆರಡು ದಿನಗಳಲ್ಲಿ ಆಗುವ ಬೈಪಾಸಿಗಾಗಿ ತಯಾರಾಗಿ ಮಲಗಿದ್ದ ಅಮ್ಮ. ಅವಳ ತಲೆಬದಿಯಲ್ಲೇ ಯಾವಾಗಲು ನಗುತ್ತಿರುವ ಅಪ್ಪ.

ಯೂನಿಫಾರ್ಮ್‌ನಲ್ಲಿ ಸ್ಮಾರ್ಟ್ ಐಪಿಎಸ್ ಆಫೀಸರ್. ಬೈಕಿನಲ್ಲಿ ಆಫೀಸಿಗೆ ಹೋದವನು ಒಂದು ದಿನ ಮನೆಗೆ ಮರಳಲಿಲ್ಲ. ತಾನು ಆರು ತಿಂಗಳ ಕೂಸು. ಅಂದಿನಿಂದ ಹಗಲು ರಾತ್ರಿ ತನಗೆ ಮುಡಿಪಾಗಿಟ್ಟು ಬೆಳೆಸಿದ ಅಮ್ಮ. ಮಗನಿಗೆ ಅಲರ್ಜಿಯೆಂದು ಎಂದೂ ತನ್ನ ಪ್ರೀತಿಯ ಮಲ್ಲಿಗೆ ಹೂ ಮುಡಿಯದ ಅಮ್ಮ. ನಾನು ಬೆಳೆದು ಕಾಲೇಜು ಸೇರುವವರೆಗೂ ಒಂದು ದಿನವೂ ತನ್ನನ್ನೂ ಬಿಟ್ಟು ಒಂದು ಸಿನಿಮಾ ನೋಡದ ಅಮ್ಮ. ಇವಳಿಗೆ ತಿಳಿದರೆ ಬದುಕುಳಿಯುತ್ತಾಳೆಯೇ?

ಅಮ್ಮ ಎಲ್ಲರಂತಲ್ಲ.

ತನಗೆಲ್ಲಾ ಹೇಳಿದ್ದಳು. ವಯಸ್ಸಿಗೆ ತಕ್ಕಷ್ಟು ಜ್ಞಾನ. ಈ ಜಗತ್ತಿನಲ್ಲಿ ಬೇಕಾಗುವ ತಿಳುವಳಿಕೆ. ಏನು ಸರಿ, ಏನು ತಪ್ಪು, ಎಲ್ಲಾ ವೈಜ್ಞಾನಿಕ ವಿವರಣೆ. ಹಾಗಾಗಿಯೇ ತಾನು ಯಾವಾಗಲೂ ಜೀಕೆ ಟೆಸ್ಟಿನಲ್ಲಿ ಫಸ್ಟ್. ಏನು ಪ್ರಯೋಜನವಾಯ್ತು. ಅವನು ಹಾಗೇ ಎಷ್ಟು ಗಂಟೆ ಕೂತಿದ್ದನೋ ಗೊತ್ತಿಲ್ಲ. ಅಮ್ಮ ನಿದ್ದೆ ಹೋಗಿದ್ದಳು,

ಚ್ಯಾನಲ್ಲಿಂದ ಚ್ಯಾನಲ್ಗೆ ಹಾರುತಿದ್ದ ಅವನ ಕೈಯಲ್ಲಿದ್ದ ರಿಮೋಟ್. ಹೊಟ್ಟೆಪಾಡಿಗಾಗಿ ಆಫ್ಘಾನಿಸ್ತಾನಕ್ಕೆ ಹೋಗಿ ಶಿರಚ್ಛೇದಕ್ಕೆ ಒಳಗಾದ ಟ್ರಕ್ ಡ್ರೈವರ್. ಎಫ್ ಟಿ.ವಿ. ಯ ನಗ್ನ ನರ್ತಕಿ. ಲೆಬನಾನ್ ನಲ್ಲಿ ಬಾಂಬ ದಾಳಿಗೆ ಸಿಕ್ಕಿ ನಲುಗಿದ ರಕ್ತ ಸಿಕ್ತ ಹಸುಳೆಗಳು. 80 ವರ್ಷದ ಮುದುಕನಿಗೆ ಪುತ್ರೋತ್ಸವ.

ತಟ್ಟೆಯಲ್ಲಿ ಹಿಟ್ಟು ಮುಕ್ಕುತ್ತಿರುವ ಲಾಲೂ ಪ್ರಸಾದ ಯಾದವ್. ಆನೆದಂತ ಸಿಗಿಯುತ್ತಿರುವ ಬೊಚ್ಚುಬಾಯಿ ಚೀನಿ ಮುದುಕ. ಸಂಸ್ಕಾರದಲ್ಲಿ ಓಂಕಾರ, ಸೋನಿಯಾದಲ್ಲಿ ಕಜರಾ ರೇ, ಸಿಎನ್ಎನ್.ನಲ್ಲಿ ಬುಶ್ ಅಟ್ಟ ಹಾಸ.

ಯೂ ಆರ್ ಪಾಸಿಟಿವ್.

ಪಾಸಿಟಿವ್ ಎನರ್ಜಿ. ಪಾಸಿಟಿವ್ ಆಟ್ಟಿಟ್ಯೂಡ್. ಪಾಸಿಟಿವ್ ಅಪ್ರೋಚ್. ಎಷ್ಟು ಚಂದದ ದಿನಗಳು.

"ಇವತ್ತು ಮಣಿಪಾಲ್ ಆಸ್ಪತ್ರೆಗೆ  ಹೋಗಬೇಕಲ್ಲೋ ಬ್ಲಡ್ ಟೆಸ್ಟಿಗೆ. ಮರೆತೆಬಿಟ್ಯಾ?"

ಅಮ್ಮ ನೆನೆಪು ಮಾಡಿದಳು? ಇನ್ನೆರಡು ದಿನಕ್ಕೆ  ಅವಳ ಆಪರೇಷನ್. ಕಾದಿಟ್ಟ ಬ್ಲಡ್ ಡೋನರ್ಸ್ ಲಿಸ್ಟನಲ್ಲಿ ತನ್ನದೇ ಮೊದಲ ಹೆಸರು. ತಮ್ಮಿಬ್ಬರದು ಒಂದೇ ಬ್ಲಡ್ ಗ್ರೂಪ್. ಅವಳಿಗೆ  ಗರ್ಭಕೋಶದ ಆಪರೇಷನ್ ಆದಾಗಲೂ ರಕ್ತ ಕೊಟ್ಟವನು ತಾನೇ. ಆದರೆ ಪುನಃ ಟೆಸ್ಟ್  ಮಾಡಿಸಲೇಬೇಕೆನ್ನುವುದು ಆಸ್ಪತ್ರೆಯ ಕಾಯಿದೆ.

ಹೇಗೆ ತಪ್ಪಿಸಿಕೊಳ್ಳುವುದು? ಅಮ್ಮನಿಗೆ ಏನು ಹೇಳೋದು? ಆರೆಳು ವರ್ಷಗಳ ಹಿಂದಿನ ಮಾತು. ತಮ್ಮ ಡ್ರೈವರ್ ಮಾದಪ್ಪ ಇದ್ದಕಿದ್ದಂತೆ ಕಾಣೆಯಾಗಿದ್ದ. "ಅವನಿಗೆ ಟಿ.ಬಿ. ತೀರಾ ಹುಷಾರಿಲ್ಲ. ಊರಿಗೆ ಹೋಗಿ ರೆಸ್ಟ್ ತಗೋತಾನೆ. ಅಲ್ಲೇ ಬೇಸಾಯ ಮಾಡ್ತಾನೆ. ನಾನು ಮಣೀನ್ನ ಓದಿಸ್ಕೊಂಡು ಇಲ್ಲೇ ಇರ್ತೀನಿ" ಅಂತ ಆವನ ಹೆಂಡತಿ ಅತ್ತಕೊಂಡು ಅಮ್ಮನ ಕಾಲು ಹಿಡಿದಿದ್ದಳು. ಅಮ್ಮ ಅವಳಿಗೆ ಪ್ರತಿ ತಿಂಗಳು ಅಷ್ಟು ದುಡ್ಡು ಕೊಡುತ್ತಿದ್ದಳು. ಆಗೇನೂ ಅನ್ನಿಸಿರಲಿಲ್ಲ.

ಬೆಂಗಳೂರಿನ ಕೊಳಗೇರಿಯೊಂದರಲ್ಲೇ ಹುಟ್ಟಿ ಬೆಳೆದಿದ್ದ ಮೇದಪ್ಪನಿಗೆ ಬೇಸಾಯಕ್ಕೆ ಹಳ್ಳಿಯಲ್ಲಿ ಭೂಮಿ ಎಲ್ಲಿಂದ ಬಂತು?  ಹೆಂಡತಿ,  ಮಗು ಇಲ್ಲೇ ಏಕೆ ಉಳಿದಿದ್ದರು? ಅವನ ಮಗುವೂ ದಿನೇ ದಿನೇ ದುರ್ಬಲವಾಗಿ ಬಂದ ಜ್ವರ ವಾಸಿಯಾಗದೇ ಏಕೆ ತೀರಿಕೊಂಡಿತ್ತು?

"ತಲೇಲಿ ಸಗಣಿ ತುಂಬಿದೆ ಅವನಿಗೆ. ಮನೆಹಾಳು ಕೆಲಸ ಮಾಡೋದು. ಹೆಂಡತಿ ಮಕ್ಕಳನ್ನು ನಾಶ  ಮಾಡೋದು. ಇಲ್ಲೇ ಇದ್ದು ಔಷಧ ತೆಗೆದುಕೊಂಡಿದ್ದರಾದರೂ.. ಇವರೆಲ್ಲಾ ಎಲ್ಲಿ ಕೇಳ್ತಾರೆ."

ಊರಿಗೆ ಹೋಗಿ ಬೇಸಾಯ ಮಾಡುತ್ತಿದ್ದ ಮೇದಪ್ಪನಿಗೆ ಅಮ್ಮ ಶಾಪ ಏಕೆ ಹಾಕ್ತಿದಾಳೇಂತ ಆಗ ತಿಳಿದಿರಲಿಲ್ಲ. ಈಗ ಸ್ಪಷ್ಟವಾಗುತ್ತಿದೆ.

ಕಾರ್ಡಿಯಾಲಾಜಿಸ್ಟ್ ಆಗಬೇಕು. ಸೈಕಲ್ ಮೇಲೆ ಇಡಿ ಭಾರತ ಸುತ್ತಬೇಕು. ಗಿಟಾರ್ ಕಲಿಯಬೇಕು. ಅಮ್ಮನ್ನ ಅವಳ ಪ್ರೀತಿಯ ಹಿಮಾಲಯಕ್ಕೆ ಕರೆದುಕೊಂಡು ಹೋಗಬೇಕು. ಶಿಖಾ ಅಂಥ ಹುಡುಗೀನ್ನ ಮದುವೆಯಾಗಬೇಕು... ಏನೆಲ್ಲಾ ಕನಸುಗಳು.

ಏನಂತೆ ಇದೂ ಒಂದು ರೋಗ. ಬ್ಲಡ್ ಪ್ರೆಶರ್, ಡಯಾಬಿಟಿಸ್ ಇದ್ದವರು ದಿನಾ ಮಾತ್ರೆ ತಗೆದುಕೊಳ್ಳುವುದಿಲ್ಲವೇ? ಸೆಮಿನಾರ್ ನಲ್ಲಿ ಅಂದು ಯಾರೋ ಹೇಳಿದ್ದಕ್ಕೆ ಆ ಕಪ್ಪು ಹುಡುಗಿ "ಬೀಪಿ ಡಯಾಬಿಟಿಸ್ ಬಂದವರಿಗೆ ಎಲ್ಲರ ಅನುಕಂಪ ಸಿಗುತ್ತೆ. ಅವರನ್ನು ಕಾಯಿಲೆ ಬಂತೆಂದು ಯಾರೂ ಮನೆಯಿಂದ ಹೊರಗೆ ಹಾಕೊಲ್ಲ" ಅಂದಿದ್ದಳಲ್ಲಾ... ಅಮ್ಮ ತನ್ನನ್ನು ಮನೆಯಿಂದ ಹೊರಹಾಕೋದು ಸಾಧ್ಯವೇ?

ಆದರೆ . ಅಮ್ಮನಿಗೆ ಹೇಳೋದು ಹೇಗೆ? ಡೆಂಟಿಸ್ಟ್ ಹತ್ತಿರ ಹೋದಾಗ ಬಂದಿರಬಹುದು. . ಆ ಹೇರ್ ಕಟ್ಟಿಂಗ್ ಸಲೂನ್ ದರಿದ್ರಾಂತ ಗೊತ್ತಾಗಲಿಲ್ಲ. ಟ್ರೆಕ್ ಹೋದಾಗ ಆ ಕುರುಬರ ಹುಡುಗನ ಗಾಯ ತೊಳೆದಿದ್ದೆ, ಏನು ಹೇಳಿದರೂ .. ಮೊಬೈಲ್ ಮೇಲೆ ಅಳಿಸಲಾಗದ ಆ ಮುಖ, ಮೈ ಗಂಟಿದ ಒಣಗಿದ ತರಗೆಲೆಗಳು. ಅಮ್ಮನಿಗೆ  ಹೇಗೆ ಸುಳ್ಳು ಹೇಳೋದು?

ಸ್ಲೀಪಿಂಗ್ ಟ್ಯಾಬ್ಲೆಟ್ ತಗೊಂಡರೆ ಸಾವು ಸುಲಭವಾಗಿ ಬರಬಹುದು  ಆದರೆ ಅಂಥಾ ಅಮ್ಮನಿಂದ  ತಾನು ಕಲಿತದ್ದು ಇಂಥ ಹೇಡಿತನವೇ?

ಊಹೂಂ ಏನು ಬಂದರೂ ಎದುರಿಸುತ್ತೇನೆ. ದಿನಾ ಎಷ್ಟೊಂದು ಸಂಶೋಧನೆ ನಡೆಯುತ್ತದೆ ಜಗತ್ತಿನಲ್ಲಿ. ಏನೋ ಒಂದು ಔಷಧಿ ಕಂಡು ಹಿಡಿದೇ ಹಿಡಿಯುತ್ತಾರೆ. ಈಗಲೂ ಎಷ್ಟೋ ಒಳ್ಳೇ ಔಷಧಿಗಳು ಬಂದಿದೇಂತ ಹೇಳ್ತಾರಲ್ಲಾ   ಐ ವಿಲ್ ನಾಟ್ ಗಿವ್ ಇನ್. ಐ ವಿಲ್ ಫೈಟ್ ಇಟ್ . ಅಮ್ಮಾ, ಪ್ಲೀಸ್ ಹೆಲ್ಪ್ ಮಿ.

ಒಂದು ಕ್ಷಣ ಮನಸ್ಸು ಹಗುರವಾಗಿ ಅವನ ದುಃಖದ  ಕಟ್ಟೆಯೊಡೆಯಿತು. ಮೊಣಕಾಲುಗಳ ನಡುವೆ ಮುಖ ಹುದುಗಿಸಿ ಹಾಸಿಗೆಯ  ಮೇಲೆ  ಬಿಕ್ಕಿ ಬಿಕ್ಕಿ ಅಳುತ್ತ ಕೂತ ಅವನಿಗೆ ಹಿಂದಿನಿಂದ ಅಮ್ಮ ಬಂದು ನಿಂತಿದ್ದು ತಿಳಿಯಲಿಲ್ಲ ಅವಳ ಕೈ ಭುಜದ ಮೇಲಿಟ್ಟಾಗ ಹಿಂತಿರುಗಿ ನೋಡಿದ ಅವಳ ಮುಖ ಬಿಳಿಚಿಕೊಂಡಿತ್ತು.

"ಅಮ್ಮಾ"

"ಸಮಾಧಾನ ಮಾಡ್ಕೋ"

"ಅಮ್ಮ ನಂಗೆ . ನಾನು"

" ನಂಗೆಲ್ಲಾ ಗೊತ್ತಾಯ್ತು. ಈಗ ತಾನೇ ನಿನ್ನ ನೀಲಿ ಟೀ ಶರ್ಟ್ ದೋಭಿಗೆ ಹಾಕಿದೆ."

"ಆಂ..?

ಜೇಬಿನಲ್ಲಿದ್ದ ರಿಪೋರ್ಟ್ ಅಮ್ಮ ನೋಡಿ ಬಿಟ್ಟಿದ್ದಳು.

" ಅಮ್ಮ ನನ್ನನ್ನು ಕ್ಷಮಿಸ್ತೀಯಾ ."

ನಿಧಾನವಾಗಿ ಅವನ  ಗಲ್ಲ ಹಿಡಿದೆತ್ತಿ ಅವಳು ತನ್ನೆದೆಯಲ್ಲಿ  ಅವನ ಮುಖ ಹುದುಗಿಸಿಕೊಂಡಳು.

"ಎಲ್ಲಾ ಸರಿಹೋಗುತ್ತೇ ನಾನಿದೀನಿ ನಿನ್ನ ಜೊತೆಗೆ. ಅಳಬೇಡ, ಧೈರ್ಯವಾಗಿರು"

ಅವನು ಮಾತಾಡಿದಾಗ ಧ್ವನಿ ನಡುಗುತ್ತಿತ್ತು.

"ನಂಗೆ... ನಂಗೆ... ಹೇಗೆ ಬಂತೂಂತ... ನಾನೂ ಒಂದಿನ."

ಅದೆಲ್ಲಾ ನಂಗೆ ಬೇಡ.  ಏಕೆ ಬಂತೂಂತ ತಿಳಿಯೋದ್ರಿಂದ ಏನು ವ್ಯತ್ಯಾಸ ಆಗುತ್ತೆ? ಅದು ನಿನ್ನೆ ನಡೆದಿದ್ದು. ನಮಗೆ ಇವತ್ತು ಮುಖ್ಯ . ನಾಳೆಯನ್ನು ಧೈರ್ಯವಾಗಿ ಎದುರಿಸೋದು ಮುಖ್ಯ. 'ವಿ ವಿಲ್ ಫೈಟ್ ಇಟ್ ಟುಗೆದರ್' ಎನ್ನುತ್ತಾ ಗಟ್ಟಿಯಾಗಿ ಅವನ ಕೈ ಹಿಡಿದು ಎಬ್ಬಿಸಿದಳು ಅಮ್ಮ.


# MATRIMONIAL

Alliance invited for a Smartha Kannada Brahmin Boy from a professionally qualified well employed girl based in Mumbai.
Name of the Groom: Aakash Vinod Rao
Date of Birth: 27-01-1996, 7.05pm, Vadodara Gujarat
Gotra: Bharadwaja Rashi: Mesha Nakshatra: Bharani, 1st Pada, Educational Qualification : LLB (Advocate) Company Secretary, Master of Commerce
Job Details: Corporate Lawyer, Senior Associate at Shardul Amarchand Mangaldas & Co. (Law Firm) Mumbai
Place of Working : Mumbai
Marital Status: Never Married, Unmarried
Package / Annual: per industry standards for Senior Associates, can be disclosed at personal meeting.
Father's Name and Occupation: Vinod Hanumant Rao, Retired Teacher
Mother's Name and Occupation : Mamta Vinod Rao, Administrative Officer LIC of India, Mumbai
Caste & Sub Caste: Brahmin, Smartha, Seernadu
No. of Brothers and Sisters : No Siblings
Expectations: Qualified & Employed
Native Place: Bengaluru
Parents Present Address : Mumbai
Contact No. Mr. Vinod Rao - 9920792562

# ಮೈಸೂರು ಅಸೋಸಿಯೇಷನ್, ಮುಂಬಯಿ

# The Mysore Association, Bombay

393, Bhau Daji Road, Matunga, Mumbai - 400 019. Tel: ( 022 ) 2403 7065
Website: www.mysoreassociation.in E-mail: mysoreassociation.mumbai@gmail.com

**ಮೈಸೂರು ಅಸೋಸಿಯೇಷನ್ ನೂರರ ನಲಿವು 1926-2026**

ಆಗಸ್ಟ್ 06, 2025

## ನೇಸರು ಜಾಗತಿಕ ಸಣ್ಣ ಕಥೆ ಸ್ಪರ್ಧೆ – 2025

# ಶತಮಾನೋತ್ಸವ ಪ್ರಶಸ್ತಿ

ಮೈಸೂರು ಅಸೋಸಿಯೇಷನ್, ಮುಂಬೈ ಒಂದು ಪ್ರತಿಷ್ಠಿತ ಕನ್ನಡ ಸಂಸ್ಥೆಯಾಗಿದ್ದು, ತನ್ನ ಶತಕವನ್ನು ಪೂರೈಸುವತ್ತ ಮುಂದುವರಿಯುತ್ತಿದೆ. ಈ ಮೊದಲೂ ಕೂಡಾ ಕನ್ನಡ ಕವನ, ಕಥೆ ಹಾಗೂ ಏಕಾಂಕ ನಾಟಕ ಸ್ಪರ್ಧೆಯನ್ನು ಆಯೋಜಿಸುತ್ತಲೇ ಬಂದಿದೆ. ಇದರ ಮುಂದುವರಿದ ಭಾಗವಾಗಿ "ಶತಮಾನೋತ್ಸವ ವಿಶೇಷ"ಜಾಗತಿಕ ಸಣ್ಣ ಕಥೆ ಸ್ಪರ್ಧೆಯ ಘೋಷಣೆಯನ್ನು ಈ ಮೂಲಕ ಮಾಡಲಾಗುತ್ತಿದೆ.
ಈ ಸ್ಪರ್ಧೆಯಲ್ಲಿ ವಿಶ್ವದಾದ್ಯಂತ ಆಸಕ್ತರೆಲ್ಲರೂ ಭಾಗವಹಿಸಬಹುದು. ಇಲ್ಲಿ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ. ಆಸಕ್ತರು ಯಾವುದೇ ವಿಷಯದ ಕುರಿತು ಕಥೆಯನ್ನು ರಚಿಸಬಹುದು.

### ನೇಸರು ಜಾಗತಿಕ ಸಣ್ಣ ಕಥೆ ಸ್ಪರ್ಧೆ –2025

| | | | |
|---|---|---|---|
| ಪ್ರಥಮ ಬಹುಮಾನ | – | ರೂ. | 20,000 |
| ದ್ವಿತೀಯ ಬಹುಮಾನ | – | ರೂ. | 15,000 |
| ತೃತೀಯ ಬಹುಮಾನ | – | ರೂ. | 10,000 |
| ಮೆಚ್ಚುಗೆಯ ಬಹುಮಾನ (ಇಬ್ಬರಿಗೆ): ತಲಾ | – | ರೂ. | 5,000 |


### ಸ್ಪರ್ಧೆಯ ನಿಯಮಾವಳಿಗಳು:

- ಕಥೆಗಳು ಕನ್ನಡದಲ್ಲಿದ್ದು, ಸ್ವರಚಿತವಾಗಿರಬೇಕು, ಅನುವಾದ ಅನುಕರಣೆ ಆಗಿರಕೂಡದು.
- ಸ್ಪರ್ಧೆಗೆ ಕಳುಹಿಸಿದ ಕಥೆಗಳು ಬೇರೆಲ್ಲೂ ಪ್ರಕಟವಾಗಿರಬಾರದು.
- ಒಬ್ಬರಿಗೆ ಒಂದೇ ಕಥೆ ಕಳುಹಿಸಲು ಅವಕಾಶ.
- ಸ್ಪರ್ಧೆಗೆ ಬಂದ ಕಥೆಯನ್ನು ಮರಳಿಸಲಾಗುವುದಿಲ್ಲ.
- ಕಥೆಗಳು 1000 ಪದಗಳಿಗೆ ಮೀರದಂತಿರಬೇಕು.
- ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದಂತಹ ಅಥವಾ ಕಂಪ್ಯೂಟರ್ ಮುದ್ರಿತ ಬರಹವನ್ನು ಅಂಚೆ ಅಥವಾ ಕೆಳಗೆ ತಿಳಿಸಿದ ಇಮೇಲ್ ಗೆ ಕಳುಹಿಸಬಹುದು.

  kate.nesaru@gmail.com
- ಬರೆದವರ ಹೆಸರು, ವಿಳಾಸ, ಜನ್ಮ ದಿನಾಂಕ, ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ಪ್ರತ್ಯೇಕ ಪುಟದಲ್ಲಿ ಬರೆದಿರಬೇಕು.
- ತೀರ್ಪುಗಾರರ ತೀರ್ಮಾನವೇ ಅಂತಿಮ. ಇದರ ಬಗ್ಗೆ ಯಾವ ಚರ್ಚೆ ಅಥವಾ ಪತ್ರ ವ್ಯವಹಾರ ಇಲ್ಲ.
- ಕಥೆಗಳು ನಮ್ಮ ಕೈ ಸೇರುವ ಕೊನೆಯ ದಿನಾಂಕ: ಅಕ್ಟೋಬರ್ 31, 2025
- ಆಯ್ಕೆಯಾದ ಕಥೆಗಳನ್ನು ನಮ್ಮ ಮೈಸೂರು ಅಸೋಸಿಯೇಷನ್ನಿನ ಮುಖವಾಣಿ 'ನೇಸರು'ವಿನಲ್ಲಿ ಕಾಲಕಾಲಕ್ಕೆ ಪ್ರಕಟಿಸುವ ಹಕ್ಕು ಮೈಸೂರು ಅಸೋಸಿಯೇಷನ್ ಕಾದಿರಿಸಿದೆ.

Postal Address:
The Mysore Association, Bombay
393, Bhau Daji Road, Matunga (Central), Mumbai - 400019
Tel: 022- 2403 7065 (M) - 83697 88157
(ಬೆಳಿಗ್ಗೆ 11.00 ರಿಂದ ಸಂಜೆ 7.00 ಘಂಟೆಯವರೆಗೆ)

## ಶತಮಾನದ ಸಂಭ್ರಮದ ನವರಾತ್ರಿ ಉತ್ಸವ



ಹಾಡಿ ಎಲ್ಲರಿಗೂ ಪ್ರಸಾದವನ್ನು ನೀಡುತ್ತಿದ್ದರು. ಹಾಗೆಯೇ ಪುರೋಹಿತರನ್ನು ಕರೆಸಿ ಚಂಡೀ ಪಾರಾಯಣ, ಚಂಡೀ ಹೋಮವನ್ನು ಮಾಡಿದರು. ಇದರಲ್ಲಿ ಕೇವಲ ಅಸೋಸಿಯೇಷನ್ನಿನ ಸದಸ್ಯರಲ್ಲದೇ, ಬೇರೆಯವರೂ ಭಾಗವಹಿಸಿದ್ದರು.

ಪ್ರತಿನಿತ್ಯ ಶಾಲೆಗಳಿಂದ ಪುಟ್ಟ ಮಕ್ಕಳು ಬಂದು ಹಾಡಿ, ಕುಣಿದು ದೇವಿಯನ್ನು ಆರಾಧಿಸುತ್ತಿದ್ದರು. ಕುಮಾರಿ ಪೂಜೆ, ಸುವಾಸಿನಿ ಪೂಜೆಗಳನ್ನು ನಡೆಸಿದರು. ಒಂದು ವಿಶೇಷವೆಂದರೆ, ಕೇವಲ ಮಹಿಳಾ ವಿಭಾಗದವರಲ್ಲದೇ ಇತರರನ್ನೂ ಈ ಕೆಲಸದಲ್ಲಿ ತೊಡಗಿಸಿದರು. ನಮ್ಮ ಮಧುಸೂದನ್, ಸಂಜೀವ, ರಂಜಿತ್, ಶ್ರೀಧರ, ಕಿರಣ, ಥಾಮಸ್, ವಾಜಿದ್, ದಯೇಶ್, ಹೇಮಾ, ಸರಸ್ವತಿ, ಶೀಲಾ ಅವರುಗಳೂ ದುಡಿದು ತಾಯಿಯ ಆಶೀರ್ವಾದಕ್ಕೆ ಪಾತ್ರರಾದರು.





ಅಂತೂ ಈ ಹತ್ತು ದಿನಗಳಲ್ಲಿ ಅಸೋಸಿಯೇಷನ್ ಕಿಕ್ಕಿರಿದು ಝುಗಝುಗ ಅನ್ನುತ್ತಿತ್ತು. ತಾಯಿಯ ವಿವಿಧ ರೂಪಗಳನ್ನು ಕೊಂಡಾಡುತ್ತಿತ್ತು. ಎಲ್ಲರಿಗೂ ತಾಯಿಯ ಆಶೀರ್ವಾದಗಳು.



ನೇಸರು ಓದುಗರಿಗೆ

ದೀಪಾವಳಿಯ ಶುಭಾಶಯಗಳು



ಮುಂಬರುವ ಕಾರ್ಯಕ್ರಮಗಳು

# ಬಿ. ವಿ. ಕಾರಂತರ ಸಂಸ್ಮರಣೆ

# ಮೂರು ದಿನಗಳ ಕನ್ನಡ ನಾಟಕೋತ್ಸವ

## ಬೆನಕ ತಂಡ, ಬೆಂಗಳೂರು ಇವರಿಂದ

**31.10.2025 ಶುಕ್ರವಾರ ಸಂಜೆ 6.30**

## ಸತ್ತವರ ನೆರಳು

ಮೇರುಕೃತಿ : ಜಿ. ಬಿ. ಜೋಶಿ

ಸಂಗೀತ ಮತ್ತು ನಿರ್ದೇಶನ : ಬಿ. ವಿ. ಕಾರಂತ

ಮರುವಿನ್ಯಾಸ : ಡಾ. ಟಿ. ಎಸ್. ನಾಗಾಭರಣ





**01.11.2025 ಶನಿವಾರ – ಸಂಜೆ 6.30**

## ಹಯವದನ

ಮೇರುಕೃತಿ : ಗಿರೀಶ್ ಕಾರ್ನಾಡ್

ಸಂಗೀತ ಮತ್ತು ನಿರ್ದೇಶನ : ಬಿ. ವಿ. ಕಾರಂತ

ಮರುವಿನ್ಯಾಸ : ಡಾ. ಟಿ. ಎಸ್. ನಾಗಾಭರಣ

**02.11.2025 ಭಾನುವಾರ – ಸಂಜೆ 6.30**

## ಗೋಕುಲ ನಿರ್ಗಮನ

ಮೇರುಕೃತಿ : ಪು. ತಿ. ನರಸಿಂಹಚಾರ್ಯ

ಸಂಗೀತ ಮತ್ತು ನಿರ್ದೇಶನ : ಬಿ. ವಿ. ಕಾರಂತ

ಮರುವಿನ್ಯಾಸ : ಡಾ. ಟಿ. ಎಸ್. ನಾಗಾಭರಣ



ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಗೃಹ,
393, ಭಾವು ದಾಜಿ ರಸ್ತೆ, ಮಾಟುಂಗ, ಮುಂಬೈ – 400 019.

**ಎಲ್ಲರಿಗೂ ನಲು ಬರುವು**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077